As required under section 22 of the Karnataka Cinema (Regulation) Act 1964.

MR SPEAKER.—Papers laid.

Representation by Members
Notice of Adjournment Motion

re: Criminal case filed by Police against the Minister for Planning

SRI S. R. BOMMAI.—Mr. Speaker Sir, We have given notice of an adjournment motion under Rule 50 of the Rules of Procedure and Conduct of Business in the Karnataka Legislative Assembly. While seeking your consent in the matter, we wish to make certain submissions. At the outset, I would like to mention that it is a very grave, serious and sensitive matter wherein all of us in this House, as representatives of the people, have to discharge our onerous duty. I may be permitted to say that still more responsibility lies on your shoulders as the custodian of the rights, privileges and duties of the representatives of the people.

Sir, this is a matter which relates to wrongful confinement of a lady. ......

ಅಧ್ಯಕ್ಷರು.—ತಾವೂ ಕೂಡ ನೋಟೀಸ್ ಕೊಟ್ಟಿದ್ದೀರಿ. ವಿರೋಧ ಪಕ್ಷದ ನಾಯಕರಾದ ಶ್ರೀ ಡಿ. ದೇವರಾಜ ಅರಸ್‌ರವರು ಅಲ್ಲದೆ ಇನ್ನೂ ಮೂರು ಜನ ಸ್ನೇಹಿತರಾದ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ಶ್ರೀ ಎಚ್. ಗಂಗಾಧರನ್‌ರವರು ಮತ್ತು ಶ್ರೀ ಲಕ್ಷ್ಮೀಸಾಗರ್‌ರವರೂ ನೋಟೀಸ್ ಕಳುಹಿಸಿಕೊಟ್ಟಿದ್ದಾರೆ. Let us not go into the facts. That is a different thing. ತಾವು ಕಳುಹಿಸಿರುವ ನೋಟೀಸನ್ನು ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಇದರಲ್ಲಿ ಎಲ್ಲ ವಿಚಾರಗಳನ್ನು ಹೇಳಿದ್ದೀರಿ. ವಿಶೇಷವಾಗಿ ಈಗ ಹೋಗುವುದು ಬೇಕಾಗಿಲ್ಲ. ಏತಕ್ಕೆಂದರೆ ತಮಗೆ ಗೊತ್ತಿದೆ. ಕೇಸ್ ರಿಜಿಸ್ಟರ್ ಮಾಡಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ವಿಷಯವನ್ನು ಈಗ ಪ್ರಸ್ತಾಪ ಮಾಡುವುದು ಬೇಡವೆಂದು ಹೇಳುತ್ತೇನೆ.

SRI S. R. BOMMAI.—I will not go into the details. I will do it within my own limitations. I will restrict to certain facts to persuade the Chair in this behalf. A case has been registered on 16-6-1981 by the Police of Bhadravathi against the Hon'ble Minister Sri C. M. Ibrahim and some others and the charges are that the wrongful confinement, attempt to rape and molest a woman. It has been alleged in the complaint filed before the Magistrate, that the lady was brought to Bangalore and was wrongfully confined in the official residence of the Hon'ble Minister and was pressurised to withdraw the complaint or not to file a complaint. It is also our further information that certain high police officers went to that officials residence and that they also pressurised this woman not to proceed with this criminal complaint. Thereafter, the matter has

been throughly investigated by the C.O.D., and a case has been registered, and an F.I.R., has been submitted to the Court. I am not going into the merits of the case.

MR. SPEAKER.—Government has taken some action.

SRI S.R. BOMMAI.—Sir, this is a very important matter and the business of this House should be postponed and this matter has to be discussed in detail.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸದಸ್ಯರು ಕನ್ನಡದಲ್ಲಿಯೇ ಮಾತನಾಡಬೇಕೆಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಇತ್ತೀಚೆಗೆ ಎಲ್ಲ ಸದಸ್ಯರು ಇಂಗ್ಲೀಷಿನಲ್ಲಿಯೇ ಮಾತನಾಡಲು ಪ್ರಾರಂಭ ಮಾಡಿದ್ದಾರೆ. ದಯವಿಟ್ಟು ಎಲ್ಲ ಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಎಲ್ಲರೂ ಕನ್ನಡವಲ್ಲಿಯೇ ಮಾತನಾಡಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

SRI S. R. BOMMAI.—The convention has been that once a Member commences his speech in a particular language, he should continue in the same language. I will amend myself in the next occasion.

Sir, here is the case where a Cabinet Minister is charged to have committed an offence under the Indian Penal Code. What action the Government has taken in this connection ? I am extremely pained to say that the officer, who was incharge of investigation, who directed for filing a F.I.R., was forced to take leave and another officer, the Superintendent of Police of the district, was summarily transferred. Has the Government any sense of responsibility towards the people to maintain law and order, to protect life and property of the people ? This is un-precedented in the history of the country and a shameful act, I would say.

MR. SPEAKER.—Please confine to Rule 50 only.

SRI S. R. BOMMAI.—Sir, certain charges were made against the Minister in this House. In Krishna's murder case, we made a charge here that the culprits were harboured at the official residence of the Hon'ble Minister. A serious case is pending investigation about the Flour Mills and a number of cases which have been debated in this House, are under investigation. We know that the situation in Bhadravathi and Shimoga is tense from the time, the Minister assumed office. The normal act I would have expected from the Hon'ble Chief Minister was to ask the concerned Minister to submit his resignation until the investigation is over and ultimately if it is found that he is not guilty, he could be taken back to the Cabinet. Instead of taking action against the culprits, the Chief Minister or the Government under his instructions to the Home Secretary, summons the officer and gives instructions to hand over office. Under the Criminal Procedure Code, there is no provision

that if there is a Criminal offence committed by anybody who is a public servant, whether he may be a Minister, sanction by the Government is necessary.

ಅಧ್ಯಕ್ಷರು.—ತಮ್ಮ ನೋಟೀಸ್‌ನಲ್ಲಿ ಏನು ಹೇಳಿದ್ದೀರಿ ಅದಕ್ಕೆ ಕನ್‌ಫೈನ್ ಆಗಿ ......

SRI S. R. BOMMAI.—The notice cannot contain all the details. I would restrict Comments to the subject matter that has been mentioned in the notice and elaborate my points

ಅಧ್ಯಕ್ಷರು. ಈಗ ತಾವು ಕಳುಹಿಸಿರುವ ನೋಟೀಸ್ ವಿರೋಧಪಕ್ಷದ ನಾಯಕರು ಶ್ರೀ ಡಿ. ದೇವರಾಜಅರಸ್‌ರವರು ಈ ಮನೆಗೆ ಕಳುಹಿಸಿರುವ ನೋಟೀಸ್ ಎಲ್ಲವನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರುತ್ತೇನೆ ಆದಕ್ಕೆ ಸಂಬಂಧಪಟ್ಟಹಾಗೆ ಮಾಹಿತಿ ಇನ್ನೂ ಬಂದಿಲ್ಲ. ಈ ಮುದ್ದೆ ವಿಷಯದ ಗಹನತೆಯನ್ನು ಗಮನಿಸಿ ತಮ್ಮ ಅಡ್ಜರ್ನ್‌ಮೆಂಟ್ ಮೋಷನನ್ನು ಕನ್‌ವರ್ಟ್ ಮಾಡದೆ ಬೇರೆ ರೀತಿಯಲ್ಲಿ ಅಂದರೆ ರೂಲ್ ನಂಬರ್ ೫೯ರ ಒಳಗೆ ಸದಸ್ಯರಿಗೆ ಅನುಕೂಲವಾಗುವ ರೀತಿಯಲ್ಲಿ ಡಿಸ್‌ಕಷನ್‌ಗೆ ಅನುಕೂಲವಾಗುವ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು ಎನ್ನುವುದೇ ನನ್ನ ಅಭಿಪ್ರಾಯವಾಗಿರುತ್ತದೆ. ಏತಕ್ಕೆಂದರೆ ರೂಲ್ ನಂಬರ್ ೫೯ನ್ನು ಓದಿದೆ. ಅದರ ಕೆಳಗೆ ಇದು ಬರತಕ್ಕಂಥದ್ದು ಅಲ್ಲ. ಆದರೂ ಕೂಡ ನನಗೆ ಸದಸ್ಯರ ಅಭಿಪ್ರಾಯ ಏನು ಇದೆ ಅದಕ್ಕೆ ತಡೆಹಾಕಲಿಕ್ಕೆ ಇಷ್ಟವಿಲ್ಲ. ರೂಲ್ ನಂಬರ್ ೫೯ರ ಕೆಳಗೆ. ......

SRI S. R. BOMMAI.—Sir, I know Rule 59. It is about two and a half hours' discussion. I am of the humble opinion that if this is not a matter for adjournment motion, the rule is a nullity. Sir, I would like to impress upon you that here is a case where a Minister himself commits an offence and it is under investigation. Can you expect a fair enquiry by the State Police against the Minister? And an honest Officer known for his integrity has been summarily transferred and another Officer is asked to go on leave. Can you expect a fearless enquiry in this matter? It is impossible. As long as the Minister is in office and as long as these Officers, are treated in this callous manner, it is impossible.

MR. SPEAKER.—The case is registered.

SRI S. R. BOMMAI.—But it is to be investigated. For simply registering the case, an Officer is sent. Who is the Officer dare enough to investigate it? It has already demoralised the police force and they are in an agitational mood. I would like to warn the Government that if necessary actions are not taken, perhaps there may be a widespread agitation among the police force and among the public. Sir, you will have to keep in mind that in a democratic set up, Ministers come and Ministers go. It is the bureaucratic set up or the administration which is a Civil Service, including the Police, that is the permanent feature and custodian and the executing authority. If the standards are eroded, the official morale is destroyed. Sir, nobody will be safe in this State including you, me and the Hon. Leader of the House.

ಶ್ರೀ ವೈ. ರಾಮಕೃಷ್ಣ.—ತಾವು ಇದರ ಅಡ್ಮಿಷನ್ ಬಗ್ಗೆ ಹೇಳಿದ್ದೀರಿ. ಈಗಾಗಲೇ ಮಾನ್ಯ ಅಧ್ಯಕ್ಷರು ಈ ವಿಷಯವನ್ನು ನಿಯಮ ೫೦ರ ಕೆಳಗೆ ತೆಗೆದುಕೊಳ್ಳಬೇಕೇ ಅಥವಾ ನಿಯಮ ೫೯ರ ಕೆಳಗೆ ತೆಗೆದುಕೊಳ್ಳಬೇಕೇ ಎನ್ನುವ ವಿಚಾರವನ್ನು ಪರಿಶೀಲಿಸುತ್ತಿದ್ದಾರೆ. ತಾವು ಯಾವ ವಿಚಾರವನ್ನು ನಿಯಮ ೫೦ರ ಕೆಳಗೆ ಹೇಳಬೇಕೆಂದಿದ್ದೀರೋ ಅದನ್ನು ನಿಯಮ ೫೯ರ ಕೆಳಗೆ ಹೇಳಬಹುದಲ್ಲಾ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಿಯಮಾವಳಿ ೩೧೨ರ ಕೆಳಗೂ ಹೇಳಬಹುದು, ೧೪೬ರ ಕೆಳಗೂ ಹೇಳಬಹುದು. ೬೩ರಲ್ಲೂ ಹೇಳಬಹುದು, ರೂಲ್ ೫೦ ಇರುವುದು ಏತಕ್ಕೆ ?

ಶ್ರೀ ವೈ. ರಾಮಕೃಷ್ಣ.—ಅದನ್ನು ಆಲೋಚನೆ ಮಾಡಿ ನಿಯಮಾವಳಿ ೫೯ರ ಕೆಳಗೆ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಪಿ. ರಾಮ್‌ದೇವ್.—ನಿಯಮ ೫೦ರ ಕೆಳಗೆ ಏಕೆ ಹೇಳಬಾರದು ?

MR. SPEAKER.—Please refer to Page 424 of Kaul & Shakdhar :

"The factors which usually go in favour of deciding with the matters of service, grievances and individual cases of administrative character usually do not..."

Therefore it is a decision taken by the Government.

SRI S. R. BOMMAI.—I completely agree with the Chair, so far as the observations are concerned in respect of day-to-day administrative matters. That cannot be a subject mater of an adjournment motion. Sir, if it were a normal course of transfer, we would not have raised. A number of transfers are done by the Chief Minister every day and we have assured him that we do not interfere in transfers. Till now we have not interfered even in a single case. But here is a case where there has been violation of the accepted cannons of public administration. You will have to look into the incident.

ಮಾನ್ಯ ಅಧ್ಯಕ್ಷರು.—ಈ ವಿಷಯವನ್ನು ನಿಯಮಾವಳಿ ೫೦ರ ಕೆಳಗೆ ಚರ್ಚೆ ಮಾಡಬೇಕೆ ಬೇಡವೇ ಎನ್ನುವ ವಿಷಯ ಇಲ್ಲಿದೆ. ಆದರೆ ನಿಯಮಾವಳಿ ೫೦ರ ಕೆಳಗೆ ತಾವು ಕೊಟ್ಟಿರತಕ್ಕ ನೋಟೀಸ್ ಬರುವುದಕ್ಕೆ ಸಾಧ್ಯವಿಲ್ಲ. ವಿಷಯದ ಗಹನತೆಯನ್ನು ಅರಿತು ನಿಯಮ ೫೯ರ ಕೆಳಗೆ ಈ ವಿಷಯವನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳತಕ್ಕ ಅಭಿಪ್ರಾಯ ಇದೆ ಎಂದು ಹೇಳಿದೆ.

SRI S. R. BOMMAI.—The question is commission of an offence by a Minister.

MR. SPEAKER.—That case is there. The F.I.R. is given. There is no lapse on the part of the Government. That is why I am suggesting that this matter can be discussed under Rule 59.

SRI S. R. BOMMAI.—Where there are patent violations of accepted canons of public administration and the Government has rushed to shield a culprit instead of protecting the citizens and honest Officers, can such a matter be a day-to-day administrative matter ? The situation is quite different. It is not a normal transfer,

There is a violation of the administrative norms and morals. What is the effect ? Today, the entire State is watching us every citizen of the State wherein a woman has been molested and wrongfully kept and when she has filed a complaint and when a Police Officer has acted upon it, the Government has acted in a manner to describe which I cannot use words. Instead of taking legal action and asking the Officer to continue the investigation without fear or favour, it has put a hindrance, an obstacle, in conducting a fair investigation by the Officers. This is not a day-today administrative matter.

ಮಾನ್ಯ ಅಧ್ಯಕ್ಷರು.—ಈ ಷಯಂದ ಗಹನತೆಯುನ್ನು ಗಮನಿಸಿ ಇದನ್ನು ರೂಲ್ ೫೦ರ ಬದಲು ೫೯ರಲ್ಲಿ ಅವಕಾಶ ಮಾಡಿಕೊಡಬೇಕೆಂಬ ಅಭಿಪ್ರಾಯ ನನ್ನದು ಇದೆ.

SRI S. R. BOMMAI.—Here particulary the conduct of a Minister is involved. I will say, mis-conduct of a Minister. In similar cases in this House and the Upper House, in the case of Sri Kittur, not even a complaint was registered. We discussed the matter. The then Chief Minister asked him to resign and after the investigation was over, he was re-instated. I will quote another incident where Sri Devandrapppa Ghalappa, then Minister, there was a complaint and hewas asked to resign. It is the question of political morality. I still have hopes in the Chief Minister.

SRI Y. RAMAKRISHNA.—We have got so many avenue to discuss the matter. The Hon.Speaker was kind enough to allow this House to take up the discussion under Rule 59. I think that must be exhaustive. But to take up this matter under Rule 50 is definitely outside the purview.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಮಂತ್ರಿಗಳಿಗೆ ನಿಯಮ ೫೦ ಹಾಗೂ ೫೯ ಕ್ಕೂ ಇರುವ ವ್ಯತ್ಯಾಸ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ವೈ. ರಾಮಕೃಷ್ಣ.—ಆ ಬಗ್ಗೆ ಮಾನ್ಯ ಅಧ್ಯಕ್ಷರು ಹೇಳುತ್ತಿದ್ದಾರೆ.

ಶ್ರೀ ಸಿ. ಎಂ. ಇಬ್ರಾಹಿಂ.—೫೦ಕ್ಕೂ ೫೯ಕ್ಕೂ ೯ ಅಂಕಿಗಳ ವ್ಯತ್ಯಾಸ ಇದೆ.

SRI S. R. BOMMAI.—We have to apply rule 50 and 52. Whether my motion comes under that; whether it is a definite matter; whether it is of recent occurance; whether it is urgent. We have to apply these rules.

SRI Y. RAMAKRISHNA.—Please continue to read the same rule.

SRI S. R. BOMMAI.—Whether it is matter of sub judice.

MR. SPEAKER.—Please refer to page 428 of Parliamentary Procedure and Practice by Kaul and Shakdhar.

" After Independence, Speaker Mavlankar held that the arrest of a member of the House under the ordinary law of the land was not a breach of privilege of the House......... "

That is why I did not want to shut the Hon. Members from expressing their views and that is why I wanted to take up this matter under rule 59.

SRI S. R. BOMMAI.—I am not raising any Breach of Pr ivilege. Under Clause (iii) of Rule 52, it is said like this ;

" (iii) the motion shall be resticted to a specific matter of recent occurance ;

(iv) the motion shall not raise a question of privilege ;

(v) the motion shall not revive discussion on a matter which has been discussed in the same session;

(vi) the motion shall not anticipate a matter............"

No anticipatory matter is there.

" (vii) the motion shall not deal with any matter which is under adjudication by a Court of Law jurisdiction in any part of India. "

MR. SPEAKER. –FIR has been filed.

SRI S. R. BOMMAI.—I am not going into the merits of the case. We will be failing in our duty if we do not discuss this matter today and certain decisions are taken. We owe a duty to the people as their representatives. If a Minister who is expected to protect the citizens and help to maintain the law and order are himself commits such an offence, is it not a matter which could be dissussed ? I am not giving the details. The question here is whether he could continue in office: We will convince you if the adjournment motion is allowed. It is now for the Chief Minister to act.

MR. SPEAKER.—All these could be said under rule 59.

SRI S. R. BOMMAI.—No.

MR. SPEAKER.—Why not.

SRI S. R. BOMMAI.–Rule 59 is meant for 'matter of urgent public importance."

SRI R. GUNDU RAO —Where is the ' public interest,?

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಖ್ಯಮಂತ್ರಿಗಳಿಗೆ ಪಬ್ಲಿಕ್ ಇಂಟರೆಸ್ಟ್ ಇಲ್ಲ. ಅವರ ಇಂಟರೆಸ್ಟ್ ಮಾತ್ರ ಇದೆ. We know that the Chief Minister cannot touch this Hon. Minister.

SRI M. VEERAPPA MOILY.—Sri Bommai s mentioning this will not attract rule 50. It could be brought under rule 59. On the plea of public importance, you cannot draw the attention or invoke provisions of rule 50.

SRI S. R. BOMMAI.—I am amazed......

SRI M, VEERAPPA MOILY.—You need not be amazed ; you can just go through the rules.

SRI S. R. BOMMAI.—I am amazed at the observation of the Hon. Finance Minister. The matter which is seized by the House at present, it is not a matter which could be discussed ?

SRI M. VEERAPPA MOILY.—Even rule 59 could be invoked for that.

SRI S. R, BOMMAI.—Why not Rule 50 ?

SRI AZEET SAIT.—When the leader of the Opposition Sri Bommai said that this is an urgent matter and is of recent occurance, you were good enough to say that it could be discussed but what prevents you to accept rule 50? When you have said that is is a very important matter and you could sense the feelings of the House. Why not discuss under rule 50, instead of suggesting Rule 59 ?

SRI S. R. BOMMAI.—The difference between Rule 59 and Rule 50 is very vide.

SRI M. VEERAPPA MOILY.—If the Chair could permit me to speak.... I have gone through the Notice of the adjournment motion also. In fact I feel it is a mistake that they have put as 'adjournment motion' it is really a motion under Rule 59. and not under Rule 50 Hon.Speaker may kindly go through it. He has also given explanatory note as annexure. This is required under Rule 59 and not under Rule 50. A clear reading of the very motion moved in this House, would indicate that it is a motion made under Rule 59. and not under Rule 50. Rule 50 does not contemplate any explanatory note. It is only Rule 59 which requires an explanatory note.

SRI K.H. SRINIVAS.—If the explanatory note is redundant that could be deleted.

SRI AZEET SAIT.—My friend Hon,Finance Minister has said that the notice given by Sri Bommai has an explanatory note, That explanatory note need not contain whatever Sri Bommai has to say. A simple hint is given, I do not know in which Engish School he has studied. Please try to understand the notice.

SRI S. R. BOMMAI.—The first thing is, the Hon. Finance Minister has not read my notice. It does not contain any explanatory note. I have not given any explanatory note. Rule 59 is only a discussion It is not a motion. Certain distinction will have to be made Under Rule 50 it is a motion. Under Rule 59 it is a discussion. If we raise a matter under rule 59, the matter will be debated. There will beno motion and vote. No voting will take place under Rule 59. Supposing you are free to allow this motion under Rule 50, we will have to take the consent of the House and there will be a debate. Therefore, we have demanded in the motion removal of Sri C. M. Ibrahim and rescinding of the orders passed against the Police Officers. So. motion is different and discussion is different. We are not here to debate this matter. Therefore we have moved the motion asking the resignation or the dismissal of the Minister. We cannot do it under Rule 59.

SRI R. GUNDU RAO.—You have no right to demand.........

SRI S. R. BOMMAI.—We have every right to demand the resignation. It is the prorogative of the Chief Minister. That prorogative has to be exercised judiciously. If you do not exercise that prorogative judiciously, it is for the people to judge.

SRI R. GUNDU RAO.—They have judged already.

SRI S. R. BOMMAI.—I know about Dharwar Rural election. Sri R. Gundu Rao was not elected by the people as the Chief Minister. I have demanded mid-term poll. I have challenged him; let him accept it.

SRI R. GUNDU RAO.—I have seen sufficient challenges. Why do you challenge ?

SRI S. R. BOMMAI.—He did not o to the people as a Chief Minister.

MR. SPEAKER.—That is not the matter now before us.

2-30 P.M.

SRI V. V. PATTAR.—My Point of Order is that he cannot take this question under Rule 50. Rule 50 is meant for moving a censure motion against the action of the Government. It is of such a gravity.

MR. SPEAKER.—I know all those things.

SRI V. V. PATTAR.—Now the allegation made by the other party is, questioning the very action of the Government.

MR. SPEAKER.—There is no Point of Order.

SRI A. LAKSHMISAGAR.—May I rise on a Point of Order? Sir, it is unfortunate............

MR SPEAKER.—Are you on the point of order on the point raised by your leader?

SRI A. LAKSHMISAGAR.—There is no difference. You are seeing it only in the air. There is no difference absolutely. I have on a similar occasion in the month of March, '80 in the wake of murder of Krishna moved an adjournment Motion and the matter came to be discussed at length on the floor of this very House. This is reported in volume 25. This is on the same matter. The question that should be constructed by you in giving your leave to move the Adjournment Motion for further discussion is governed and set out by the rule 52 and other rules.

MR. SPEAKER.—That is what your leader was saying.

SRI A. LAKSHMISAGAR.—But, you questioned in telling ....

MR. SPEAKER.—I could not say you raise it under 59, I have never said it.

SRI A. LAKSHMISAGAR.—My Point of Order confines only to this. It cannot be brought in our submission. It cannot be brought under Rule 59. It also refers explicitly for discussion on matters of public importance.

ಅಧ್ಯಕ್ಷರು.—ಈಗ ತಾವು ಕೊಟ್ಟಿರುವ ನೋಟೀಸನ್ನು ನಾನು ಈ ಸಭೆಗೆ ಓದಿದರೆ ಗೊತ್ತಾಗುತ್ತದೆ. ಅದನ್ನು ನಾನು ಇನ್ನೂ ಓದಿಲ್ಲಾ. ಅದರಲ್ಲಿ ತಾವು ಹೇಳುವ ಅಂಶ ಬರುವುದಿಲ್ಲ. ನಿಯಮ ೫೯ರಲ್ಲಿ ವಿಷಯ ಏನು ಇದೆ ಅದನ್ನೇ ತಮ್ಮ ನಾಯಕರು ಹೇಳುತ್ತಿದ್ದಾರೆ. ಮತ್ತೆ ಅದೇ ವಿಷಯ ತಾವು ಈಗ ಹೇಳುತ್ತಿದ್ದೀರಿ. ಮೊದಲೇ ನಾನು ಆ ವಿಷಯವನ್ನು ಕೇಳಿದ್ದರಿಂದ ಆ ಬಗ್ಗೆ ಚರ್ಚೆ ಮಾಡಲು ನಾಳೆಯೇ ಅವಕಾಶ ಮಾಡಿಕೊಡುತ್ತೇನೆಂದು ನಾನು ಮೊದಲು ಹೇಳಿದೆ.

SRI A. LAKSHMISAGAR.—That portion is not relevant. We have moved a motion under Rule 50. It is for you to decide about its admissibility. All that I am trying to say in my Point of Order is that this cannot be brought under Rule 59.

ಅಧ್ಯಕ್ಷರು.—ತಮಗೆ ಗೊತ್ತಿದೆ. ಈ ನೋಟೀಸನ್ನು ಅವರು ಮೊದಲು ಕೊಟ್ಟಾಗಲೇ ನನ್ನನ್ನು ಕೇಳಿಬಿಟ್ಟು ಇದನ್ನು ಅಡ್ಮಿಸಿಬಿಲಿಟಿ ಮಾಡಿಕೊಳ್ಳ ಬಹುದೇ ಇಲ್ಲವೇ ಎನ್ನುವ ತೀರ್ಮಾನವನ್ನು ಮೊದಲೇ ನನ್ನ ಛೇಂಬರ್‌ನಲ್ಲಿ ತೆಗೆದು ಕೊಳ್ಳಬಹುದಾಗಿತ್ತಲ್ಲಾ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರದ ಬಗ್ಗೆ ತಾವೂ ಸಹ ಮೊದಲೇ ಯೋಚನೆ ಮಾಡಬಹುದಾಗಿತ್ತಲ್ಲಾ. ಅವರನ್ನು ಕೇಳಿಬಿಟ್ಟು ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಈ ರೀತಿ ಮಾಡಿದ್ದೇವೆ ಎಂದು ಹೇಳ ಬಹುದಾಗಿತ್ತು. They are totally different and they are intended for different purposes. Let me make this very clear. Shakdar is very clear. Rules are also very clear. I have never come across of a case you were trying to say.

MR. SPEAKER.—After all only two matters are mentioned in this, namely, the offence case has been registered. For that we need not adjourn the House and discuss the matter and the other one you have mentioned is the transfer of the officer.

SRI A. LAKSHMISAGAR.—This is totally misreading. Subject to the provisions of the Rule 50 a motion for adjournment of the business of the Assembly for the purpose of discussing a definit matter of public importance can be taken. These are the governing words of the motion of which notice is given. This is only within your jurisdiction and purview to find out whether the matter comes within the expressions used namely "for the purpose of discussing a definite matter of urgent public importance".

ಅಧ್ಯಕ್ಷರು.—ಈಗ ತಾವು ಏನು ಹೇಳುತ್ತಿದ್ದಿರೋ ಅದನ್ನೇ ನಿಮ್ಮ ನಾಯಕರು ಮೊದಲು ಹೇಳುತ್ತಾ ಇದ್ದರು. ಮಧ್ಯೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಅವರನ್ನು ಕೂರಿಸಿ ಬಿಟ್ಟು ಅದೇ ವಿಷಯವನ್ನೇ ಹೇಳುತ್ತಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್,—ತಾವು ಈ ಬಗ್ಗೆ ಹೇಳತಕ್ಕಂಥಾ ಸಲಹೆಗಳನ್ನು ನಾನು ಇದುವರೆಗೂ ಕೇಳಿದ್ದೇನೆ. ಆದರೆ ನನಗೆ ಇದರ ಬಗ್ಗೆ ಅಂತಿಮ ತೀರ್ಮಾನ ಏನು ಅನ್ನುವುದು ಅರ್ಥವಾಗುತ್ತಾ ಇಲ್ಲ. ನನಗೆ ತಿಳಿದಿರತಕ್ಕಂಥಾ ಒಂದೆರಡು ವಿಚಾರವನ್ನು ನಾನು ತಮ್ಮ ಮುಂದೆ ಇಡುತ್ತೇನೆ. ಅದೇನೆಂದರೆ ಇದರಲ್ಲಿರುವ ಅಧಿನಿಯಮ ೫೦ ಮತ್ತು ಅಧಿನಿಯಮ ೫೮ ಏನು ಇವೆ ಅದು ಬೇರೆ ಬೇರೆ ಪ್ರಸಂಗಗಳಿಗೆ ಬೇರೆ ಬೇರೆ ಸನ್ನಿವೇಶಗಳಿಗೆ ಯಾವ ರೀತಿ ಅನ್ವಯಿಸುತ್ತದೆ ಅದರಲ್ಲಿ ಸ್ಪಷ್ಟವಾಗಿದೆ. ಅದರಂತೆ ಆಯಾಯ ಪ್ರಸಂಗಗಳಿಗೆ ಅನ್ವಯ ಮಾಡಲೇ ಬೇಕಾಗುತ್ತದೆ. ಅಧಿನಿಯಮ ೫೦ರ ಬಗ್ಗೆ ಒಂದು ವಿವರಾತ್ಮಕವಾದ ನೋಟನ್ನು ನಾನು ಬರೆದು ಕಳುಹಿಸಿದ್ದೇನೆ. ಈ ವಿಷಯವನ್ನು ನಾನು ಹೋದ ಅಸೆಂಬ್ಲಿಯಲ್ಲೂ ಕೂಡ ಹೇಳಿದ್ದೇನೆ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿನವರು ರೂಲ್ ೫೦ರ ಕೆಳಗೇನೇ ಈ ವಿಷಯ ಬರುತ್ತದೆ ಅನ್ನುವುದನ್ನು ವಿವರಣೆ ಮಾಡುತ್ತಿದ್ದಾಗ ತಾವು ಈ ಮಧ್ಯೆ ಎದ್ದು ನಿಂತು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದಿರಿ.

ಶ್ರೀ ಎ. ಲಕ್ಷ್ಮೀಸಾಗರ್.—ಆದರ ಪೂರ್ವಕವಾಗಿ ನಾನು ಹೇಳಿದೆ ಅಷ್ಟೆ.

ಶ್ರೀ ಅಜೀಜ್ ಸೇಟ್.—ಸ್ವಾಮಿ, ತಾವು ಎಲ್ಲದಕ್ಕೂ ಕೂಡ ರೂಲ್ ರೂಲ್ ಅಂತ ಹೇಳುತ್ತಿದ್ದೀರಿ. ಆದರೆ ಪೋಲೀಸಿನವರು ಹೊಡೆಯುವುದಕ್ಕೆ ರೂಲ್ ಇಲ್ಲ, ರೇಪ್ ಮಾಡುವುದಕ್ಕೆ ರೂಲ್ ಇಲ್ಲ, ಬೇರೆಯದಕ್ಕೆ ಮಾತ್ರ ರೂಲ್ ಅಂತ ಹೇಳುತ್ತಿದ್ದೀರಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ನಾನು ತಿಳಿದು ಕೊಂಡಿರುವ ಮಟ್ಟಿಗೆ ಈ ನಿಯಮ ೫೦ಕ್ಕೆ ಮತ್ತು ೫೮ಕ್ಕೆ ಏನು ವ್ಯತ್ಯಾಸ ಇದೆ ಎಂದರೆ, ಈ ೫೦ನೇ ನಿಯಮ ಏನು ಹೇಳುತ್ತದೆ ಎಂದರೆ ಈ ಸಭೆಯು ಬೇರೆ ಕಾರ್ಯ ಕಲಾಪಗಳನ್ನು ಬದಿಗಿರಿಸಿ ಈ ವಿಷಯಕ್ಕೆ ಪ್ರಾಧಾನ್ಯತೆ ಕೊಟ್ಟು ಮುಂದುವರಿಸಬೇಕು ಎಂದು ಹೇಳುತ್ತದೆ. ಹಾಗೆಯೇ ನಿಯಮ ೫೮ ಏನು ಹೇಳುತ್ತದೆ ಎಂದರೆ ಮಾನ್ಯ ಅಧ್ಯಕ್ಷರು ಈ ನಿಯಮದ ಮೇರೆಗೆ ನಿಗದಿ ಮಾಡತಕ್ಕ ಕಾಲದಲ್ಲಿ ಈ ವಿಷಯವನ್ನು ಚರ್ಚೆ ಮಾಡತಕ್ಕಂಥಾದ್ದು ಎಂದು ಹೇಳುತ್ತದೆ. ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ಅನುಕೂಲವಾಗತಕ್ಕ ನಿಯಮ ಎಂದರೆ ಅದು ೫೮ನೇ ನಿಯಮ. ಇದರ ಮೇರೆಗೆ ಈ ವಿಷಯವನ್ನು ಅವರು ಪೂರ್ಣವಾಗಿ ಮಂಥನ ಮಾಡಬಹುದು. ೫೦ನೇ ನಿಯಮದ ಪ್ರಕಾರ ಅವರು ಮಾತನಾಡುವುದಾದರೆ ಈ ವಿಧಿಯ ಒಳಗಡೆ ಚರ್ಚೆಗೆ ತೆಗೆದುಕೊಳ್ಳಬಹುದಾದ ವಿಷಯದ ಅಡ್ಮಿಸಿಬಿಲಿಟಿ ಬಗ್ಗೆ ಎಲ್ಲಾ ಮಾತುಗಳು ಅಷ್ಟರಲ್ಲೇ ಅಡಕವಾಗಿರುತ್ತದೆ. If you choose to move the House for discussion under Rule 50 it will be limited only to the question of admissibility of the Motion

and it does not go beyond that and it does not go into the *merits of* the case or even that allegation. So the suggestion made by the Hon'ble Speaker for discussion in the House for 2 1/2 hours, if the Speaker agrees, it can be discussed now alone without following the procedure of adjournment of the House or other business, or fix up some other time. Therefore, the suggestion made by the Hon'ble Speaker is quite relevant and conductive for discussion on this subject.

SRI S. R. BOMMAI.—So far as the suggestion of the hon. learned Member Sri Haranahally Ramaswamy is concerned, as an advocate he has represented his party. Sir, there is a positive distinction and Rule 50 is meant for a particular purpose and Rule 59 for a particular purpose. Chapter VIII is concerned with Adjournment Motion. If you are pleased to give consent, then we will have to take leave of the House, then matter will be debated and it will be voted. I am repeating the same point and the same is repeated by them. It is not followed. In Rule 59 debate and discussion is there. But no voting. The result we know. I am confident of the result. Many of you will be for removal of Sri Ibrahim. I am confident in this House. If he is innocent, let him come back.

ಅಧ್ಯಕ್ಷರು.—ಅವರನ್ನು ಮಿನಿಸ್ಟ್ರಿಯಿಂದ ತೆಗೆಯಬೇಕು ಎಂದು ನೀವು ಒಂದು ರೆಸಲ್ಯೂಷನ್ ಮಾಡಿದರೆ ಅವರನ್ನು ತೆಗೆಯುವುದಕ್ಕಾಗುತ್ತದೆಯೇ ?

SRI S. R. BOMMAI.—I hope the Chief Minister will take into consideration the confidence of the members. There was an occasion I remember when many of the members in this House belonging to the Ruling Party demanded action in the previous session and the same could happen now. I belive in the sanctity and reasonableness of the members of this House and the members belonging to the other side also. I would like to read page 424 of Shakdar and Kaul :

> "To be in order an adjournment Motion must raise a matter of sufficient public importance to warrant interruption of normal business of the House. No hard and fast rule can be laid down as to what constitutes public importance. The question of public importance is decided on merits in each individual case."

Sir, there are no hard and fast rules. You will have to use your discretion whether this is a matter of public importance. Sir, here is a case, I will conclude my submission, where heinous offence has been committed against a lady of the State by a person holding high office of Cabinet Minister.

MR. SPEAKER.—The charge is not for that against him.

SRI S. R. BOMMAI.—No. There is a charge.

MR. SPEAKER.—The charge is not...........

SRI S. R. BOMMAI.—Since there is a complaint, there is a charge. Charge-sheet is different. It is not investigated. Here the officers who had the courage, integrity and have acted upon according to law have been summarily removed from their posts. Sir, only one thing the Government would agree here is a matter of............

MR. SPEAKER.—Rule 424, Service grievances would not constitute here. It is a routine matter of administration.

SRI S. R. BOMMAI.—It is not a service grievance. You will have to decide whether the action of the Government, the Chief Minister and the Home Secretary in asking the officer to hand over the charge instantaneously, is not a matter of public interest. Is it a service matter of ordinary nature? You have to use your discretion in this matter also. We are not here to interfere with the day-to-day administration. Even the Cabinet Minister cannot interfere in the day to day administration if the officer is acting according to law. The Chief Minister has been prounouncing day in and day out from the top of the house that he is committed to give a clean administration and there is no political interference. I would like to ask the Chief Minister whether many of his own pronouncements which are advertised in the press every day, have been kept up? Now is it not a political interference in the administration in discharge of duties by an honest officer?

Sir, so far as we are concerned, we demand immediate action by the Hon'ble Chief Minister to dismiss or take resignation of the Hon. Minister and rescind the orders of transfer and see that the confidence of the public is restored in the rule of law. Otherwise, public will lose confidence in the administration. It is in the interest of the public that we are urging. We will give more details if you are kind enough to permit us.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ. ನಾವೂ ಕೂಡ ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ. ಈ ಬಗ್ಗೆ ನಮ್ಮ ನಾಯಕರು ಮಾತನಾಡುವುದಕ್ಕೆ ಮುಂಚೆ ನಾನು ಒಂದೆರಡು ಮಾತುಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಇದಕ್ಕಾಗಿ ಸುಧೀರ್ಘವಾದ ಕಾಲವನ್ನು ತೆಗೆದುಕೊಳ್ಳುವ ಆಸೆ ನನಗಿಲ್ಲ. ಇದರ ಬಗ್ಗೆ ನಾವು ಒಂದು ವಿವರಣೆಯನ್ನು ಇದರಲ್ಲಿ ಕೊಟ್ಟಿರತಕ್ಕಂಥಾದ್ದು ನಿಜ ಆದರೆ............

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರ ನೋಟೀಸ್ ಬೇರೆ. ತಾವು ನೋಡಿದ್ದಿರಲ್ಲ, ಅವರೂ ವಿವರಣೆ ಕೊಟ್ಟಿದ್ದಾರೆ, ನೀವೂ ಕೊಟ್ಟಿದ್ದೀರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದರ ಬಗ್ಗೆ ನಾನು ಹೇಳುವುದಿಲ್ಲ. ಈ ಒಂದು ನಿಲುವಳಿ ಸೂಚನೆ ಯಾವ ಒಂದು ಕ್ರಮದಲ್ಲಿ ಇರಬೇಕೋ ಆ ಕ್ರಮದಲ್ಲೇ ನಾವು ಅದನ್ನು ಕಳಿಸಿದ್ದೇವೆ. ಅದರ ಬಗ್ಗೆ ನಾವು ವಿವರಣೆಯನ್ನೂ ಕೂಡ ಕೊಟ್ಟಿದ್ದೇವೆ. ವಿವರಣೆಗಳು ಬೇರೆ ಬೇರೆಯಾದರೆ ಅದನ್ನು

ಬಿಡಬಹುದು. ಆದರೆ ಈ ಒಂದು ಮೋಷನ್ ಏನಿದೆ ಇದನ್ನೇ ಇಟ್ಟುಕೊಳ್ಳುವುದಕ್ಕೆ ಸಾಧ್ಯತೆ ಇದೆ. ಮಾನ್ಯ ಅಧ್ಯಕ್ಷರೇ, ಈಗ ಈ ಒಂದು ನಿಯಮಾವಳಿಗಳು ಏನಿವೆ ಇದರಲ್ಲಿ ಅನೇಕ ನಿಯಮಗಳು ಇದೆ. ಒಂದಕ್ಕೊಂದು ಪೂರಕವಲ್ಲದ ನಿಯಮಗಳು ಇವೆ ಹಾಗೂ ಒಂದಕ್ಕೊಂದು ಪೂರಕವಾದ ನಿಯಮಗಳು ಇದರಲ್ಲಿವೆ. ಈ ಒಂದು ವಿಷಯವನ್ನು ಅನೇಕ ಸಂದರ್ಭಗಳಲ್ಲಿ ೨-೩ ನಿಯಮಗಳ ಕೆಳಗಡೆ ಬೇರೆ ಬೇರೆಯಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ ಎಂದು ನಾನು ಹೇಳುವುದಿಲ್ಲ ಅಥವಾ ನಾವು ಹೇಳಬಹುದಾದುದನ್ನು ಕೇವಲ ಈ ಒಂದು ವಿಧಿಯ ಕೆಳಗಡೆ ಹೇಳಬಹುದು, ಇನ್ನೊಂದು ವಿಧಿಯ ಕೆಳಗಡೆ ಹೇಳುವುದಕ್ಕಾಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯವಲ್ಲ. ಇವತ್ತು ಈ ಒಂದು ನಿಲುವಳಿ ಸೂಚನೆಯ ಸತ್ವ ಏನು ಎನ್ನತಕ್ಕಂಥ ಪ್ರಶ್ನೆ ನಮ್ಮ ಮುಂದೆ ಇದೆ. ಮಾನ್ಯ ಸದಸ್ಯರಾದ ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿದಂತೆ ಈ ನಿಲುವಳಿ ಸೂಚನೆಯ ಸತ್ವ ಏನೆಂದರೆ ಇವತ್ತಿನ ಬೇರೆ ಎಲ್ಲಾ ವಿಷಯಗಳನ್ನು ಬದಿಗಿಟ್ಟು ಈ ವಿಷಯವನ್ನು ಚರ್ಚೆ ಮಾಡತಕ್ಕಂಥಾದ್ದೆ ಇದರ ಸತ್ವ. ಇವತ್ತು ನಮ್ಮ ಮುಂದಿರತಕ್ಕಂಥ ವಿಷಯ ಈ ಒಂದು ಯೋಗ್ಯತೆಯನ್ನು ಪಡೆದಿದೆಯೋ ? ನನ್ನ ಅಭಿಪ್ರಾಯದ ಪ್ರಕಾರ ಈ ವಿಷಯಕ್ಕೆ ಅಂತಹ ಒಂದು ಯೋಗ್ಯತೆ (ನೀವು ಅದನ್ನು ಅಯೋಗ್ಯತೆ ಎಂದು ಬೇಕಾದರೂ ಕರೆಯಬಹುದು) ಪ್ರಾಪ್ತವಾಗಿದೆ. ಈಗಿರತಕ್ಕಂಥ ವಿಚಾರ ಏನೆಂದರೆ ಇಲ್ಲಿ ಒಂದು ಘಟನೆ ನಡೆದಿದೆ, ಶ್ರೀಮಾನ್ ಇಬ್ರಾಹಿಂರವರ ವಿರುದ್ಧವಾಗಿ ಏನೊಂದು ಕ್ರಿಮಿನಲ್ ಮೊಕದ್ದಮೆ ರಿಜಿಸ್ಟರ್ ಆಗಿದೆ ಅದರ ಬಗ್ಗೆ ಇಲ್ಲಿ ವಿವರಗಳನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಸರಿಯಲ್ಲ. ಅಗನ್ನು ಪ್ರಸ್ತಾಪ ಮಾಡುವುದಕ್ಕೆ ನಾನೂ ತಯಾರು ಇಲ್ಲ. ಏಕೆಂದರೆ ಪದೇ ಪದೇ ಅದರ ಬಗ್ಗೆ ನಾನು ಮಾತನಾಡುವುದಕ್ಕೆ ನನಗೆ ವ್ಯಥೆಯಾಗುತ್ತದೆ. ಅಲ್ಲದೇ ಅದು ಈಗಾಗಲೇ ಇಡೀ ದೇಶಕ್ಕೆಲ್ಲಾ ಜನಜನಿತವಾಗಿದೆ. ದಿನಬೆಳಗಾದರೆ ಒಂದಲ್ಲ ಒಂದು ಜನಜನಿತವಾದ ಅನೇಕ ಪ್ರಕರಣ ಇದ್ದೇ ಇದೇ, ಮಾನ್ಯ ಮುಖ್ಯ ಮಂತ್ರಿಗಳ ಪೋರ್ಟ್‌ಫೋಲಿಯೋ ಎಲ್ಲಿಯವರೆಗೆ ಹೋಗಿದೆ ಎಂದರೆ ಮಿನಿಸ್ಟರ್ ಫಾರ್ ಸ್ಕ್ಯಾಂಡಲ್ಸ್ ಸಚಿವ ಅನ್ನುವ ಮಟ್ಟಕ್ಕೆ ಹೋಗಿದೆ. ಈ ವಿಷಯ ದುರಾದೃಷ್ಟಕರವಾದುದ್ದು ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳನ್ನೇ ದುರಾದೃಷ್ಟ ದೇಶಕ್ಕೆ ದುರಾದೃಷ್ಟ ಶ್ರೀಮಾನ್ ಇಬ್ರಾಹಿಂ ರವರು ಏನು ರಾಮಾಯಣ ಮಾತನಾಡುತ್ತಾರೆ ಅವರ ಬಗ್ಗೆ ಇಬ್ರಾಯಣವನ್ನು ಯಾರೂ ಬರೆಯಬೇಕೋ ಏನೂ ಗೊತ್ತಿಲ್ಲ. ಇದು ಬಹಳ ಗಂಭೀರವಾದ ಪ್ರಶ್ನೆ ದಿನಬೆಳಗಾದರೆ ಎಲ್ಲರ ತಲೆಯಲ್ಲಿ ಏನು ಬಂದಿದೆ ಎಂದರೆ ಸರ್ಕಾರ ಇದೆಯೋ ಎಂದು ಅಥವಾ ಇಲ್ಲವೇ ಎಂದು ? ಶ್ರೀಮಾನ್ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದಾರೆಯೋ ಎಂದು ? ಸರ್ಕಾರ ತಪ್ಪು ಮಾಡಬಹುದು ಎಡವಬಹುದು ಒಂದು ವೇಳೆ ಯಾರೇ ಮುಖ್ಯ ಮಂತ್ರಿಗಳಾದರೂ ತಪ್ಪು ಮಾಡಬಹುದು. ಆದರೆ ಅದನ್ನು ತಿದ್ದಿಕೊಳ್ಳಬೇಕು. ಅದು ದೊಡ್ಡ ವಿಚಾರವಲ್ಲ. ಇವತ್ತು ಸರ್ಕಾರದ ಒಂದು ಪ್ರಿಸ್ಟೇಜಿಗೆ ಸಂಬಂಧಪಟ್ಟದ್ದು ಮನುಷ್ಯತ್ವಕ್ಕೆ ಸಂಬಂಧಪಟ್ಟ ವಿಚಾರ ಇದೆ. ಇವತ್ತು ಜನರು ತಮ್ಮ ಪಕ್ಷಕ್ಕೆ ಓಟು ಕೊಟ್ಟಿದ್ದಾರೆ, ನಿಜ. ಆದರೆ ತಮಗೆ ಓಟ್ಟು ಕೊಟ್ಟಿದ್ದಾರೆ ಎಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಓಟು ಶ್ರೀಮಂತಿ ಇಂದಿರಾಗಾಂಧಿಯವರಿಗೆ ಕೊಟ್ಟು ಅದು ತಮಗೆ ತಿರುಗುವುದೆಂದು ಕೊಟ್ಟಿದ್ದಾರೆ. ಆದರೆ ಜನತೆ ಇವತ್ತು ನಮ್ಮನ್ನು ಏನು ಕೇಳುತ್ತಿದ್ದಾರೆ ಎಂದರೆ ಸರ್ಕಾರ ಎಲ್ಲಿದೆ ಎಂದು. ಜನ ಓಟು ನಿಮಗೆ ಕೊಟ್ಟು ಸರ್ಕಾರ ಎಲ್ಲಿದೆ ಎಂದು ನಮ್ಮನ್ನು ಕೇಳುತ್ತಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. ಶ್ರೀಮಾನ್ ಇಬ್ರಾಹಿಂ ಅವರು ಸರ್ಕಾರದಲ್ಲಿ ಇದ್ದಾರೆಯೋ ಅಥವಾ ಇಬ್ರಾಹಿಂರವರ ಒಳಗೆ ಏನಾದರೂ ಸರ್ಕಾರ ಇದೆಯೋ ಎನ್ನುವ ಪ್ರಶ್ನೆ ಬಂದಿದೆ. ಆದರೆ ಇವತ್ತು ಸರ್ಕಾರ ಎಲ್ಲಿದೆ ಎನ್ನುವ ಪ್ರಶ್ನೆ ಪದೇ ಪದೇ ಬರುತ್ತಾ ಇರುವ ಸಂದರ್ಭದಲ್ಲಿ ಬೇರೆ ಬಿಜಿನೆಸ್ ಮಾಡುವ ಪ್ರಶ್ನೆ ಎಲ್ಲಿ ಬರುತ್ತದೆ. ಆದ್ದರಿಂದ ನಾನು ಹೇಳುವುದಾದರೂ ಇಷ್ಟೇ ಅದನ್ನು ನಾನು ಅಂತಿರಂಜಕವಾಗಿ ಹೇಳುತ್ತಿಲ್ಲ. ಇದರ ತಾತ್ಪರ್ಯ ಏನೆಂದರೆ ಶ್ರೀಮಾನ್ ಇಂಬ್ರಾಹಿಂರವರು ಏನು ತಪ್ಪು ಮಾಡಿದರು ಮಂತ್ರಿಯಾಗಿ ಇರಬಹುದು ಎನ್ನುವ ಪ್ರಸಂಗ ಬಂದಿದೆ. ಇದು ಬಾರಾ ಖೂನ್ ಮಾಫಿ ಎನ್ನುವ ರೀತಿಯಲ್ಲಿದೆ ಅವರನ್ನು ಮಂತ್ರಿ ಮಂಡಲದಿಂದ ತೆಗೆಯುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಏನು ಕಷ್ಟವೋ ನನಗೆ ಗೊತ್ತಿಲ್ಲ. ಏತಕ್ಕೆ ಹೆದರಿಕೊಳ್ಳುತ್ತಾರೆಯೋ ಗೊತ್ತಿಲ್ಲ. ಈ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇಲ್ಲಿ ಯಾವ ಪಾರ್ಟಿ ವಿಷಯವೂ ಬೇಡ, ಇದು ಬಹಳ ಗಂಭೀರವಾದ ಪ್ರಶ್ನೆ. ಆದ್ದರಿಂದ ನಾನು ಕೇಳುವುದು ಇಷ್ಟೇ. ಇವತ್ತು ಸರ್ಕಾರ ಅಸ್ತಿತ್ವದಲ್ಲಿ ಇದೆ ಎನ್ನುವುದನ್ನು ಸ್ಪಷ್ಟಪಡಿಸದೆ ಯಾವುದೇ ಕಾರ್ಯಕಲಾಪಗಳಾಗಲಿ ಲೆಜಿಸ್ಲೇಟೀವ್ ಬಿಜಿನೆಸ್ ಆಗಲಿ ಅಥವಾ ಬಿಜಿನೆಸ್ ಆಗಲಿ ಚರ್ಚೆ

ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದಲ್ಲಿ ಇಬ್ರಾಹಿಂ ಇದ್ದಾರೆಯೋ ಅಥವಾ ಶ್ರೀ ಇಬ್ರಾಹಿಂ ಒಳಗೆ ಸರ್ಕಾರ ಇದೆಯೋ ಎನ್ನುವುದನ್ನು ದೇಶಕ್ಕೆ ಸಾಬೀತು ಮಾಡಬೇಕು, ಇದನ್ನು ಸಾಬೀತು ಮಾಡಿದರೆ ತಮ್ಮ ಡಿಮ್ಯಾಂಡ್ಸ್ ಏನು ಇವೆ ಅವೆಲ್ಲವನ್ನು ನಾವು ಒಂದು ವಾರದಲ್ಲಿ ಮುಗಿಸಿ ಪಾಸು ಮಾಡಿಕೊಡುತ್ತೇವೆ. ಆದ್ದರಿಂದ ಸರ್ಕಾರದಲ್ಲಿ ಇಬ್ರಾಹಿಂರವರು ಇದ್ದಾರೆಯೋ ಅಥವಾ ಶ್ರೀ ಇಬ್ರಾಹಿಂ ಒಳಗೆ ಸರ್ಕಾರ ಇದೆಯೋ ಎನ್ನುವುದನ್ನು ಸ್ಪಷ್ಟಪಡಿಸಬೇಕಾದರೆ ಈ ವಿಷಯವನ್ನು ಚರ್ಚೆ ಮಾಡಬೇಕಾಗಿದೆ. ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡುವುದು ಯೋಗ್ಯವಾದದ್ದು. ಆದ್ದರಿಂದ ತಾವು ಈ ನಮ್ಮ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ

ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಈಗ ವಿಧಿನಿಯಮದ ೫೦ ರ ಕೆಳಗೆ ನಾವು ಹೋರಾಟ ಮಾಡುತ್ತಿದ್ದೇವೆ,

ಅಧ್ಯಕ್ಷರು.—ಈ ವಿಷಯ ೫೦ ರ ಚೌಕಟ್ಟಿನಲ್ಲಿ ಬರುವುದಿಲ್ಲ. ಆದ್ದರಿಂದ ನಾನು ಮಾನ್ಯ ಸದಸ್ಯರ ಅಭಿಪ್ರಾಯವನ್ನು ತಿಳಿದುಕೊಂಡು ವಿಧಿನಿಯಮ ೫೯ ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಜೆ, ಹೆಚ್. ಪಟೇಲ್.—ಇದು ೫೦ ರ ವಿಧಿನಿಯಮದ ಕೆಳಗೆ ಮಾತ್ರ ಬರುತ್ತದೆ. ಬೇರೆ ಯಾವ ರೀತಿಯಾಗಿ ಬರುವುದಿಲ್ಲ. ಎಂದು ನಾನು ಹೇಳುತ್ತೇನೆ. ಸಾರ್ವಜನಿಕರ ಹಿತದೃಷ್ಟಿಯಿಂದ ಇದು ಬಹಳ ಅತ್ಯಗತ್ಯ.

ಶ್ರೀ ಎ. ಲಕ್ಷ್ಮಿಸಾಗರ್.—೫೦ ರ ಕೆಳಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು ತಾವು ತೀರ್ಮಾನ ಮಾಡಿ ಇಲ್ಲಿಗೆ ಬಂದರೆ ನಾವೂ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಆ ಬಗ್ಗೆ ನನಗೆ ಅಧಿಕಾರವಿದೆ.

ಶ್ರೀ . ಎ. ಲಕ್ಷ್ಮೀಸಾಗರ್,—ಇದನ್ನು ನಾವು ಇದುವರೆವಿಗೂ ಯಾವ ಅಸೆಂಬ್ಲಿಯಲ್ಲೂ ಕೇಳಿಲ್ಲ. ತಾವು ಇಲ್ಲಿಗೆ ತೀರ್ಮಾನ ಮಾಡಿಕೊಂಡೆ ಬಂದು ಕುಳಿತು ಕೊಂಡಿದ್ದೀರಿ. ನಾವು ಇಲ್ಲಿ ತಮ್ಮನ್ನು ರಿಯಾಯಿತ್ತಿಯನ್ನು ಕೇಳುವುದಕ್ಕೆ ಬಂದಿಲ್ಲ. ಕಾನೂನು ಪ್ರಕಾರ ಅಧಿಕಾರವಿದ್ದರೆ ಅಧಿಕಾರವನ್ನು ಚಲಾಯಿಸುವುದಕ್ಕೆ ಆಗುತ್ತದೆ. ಇಲ್ಲದಿದ್ದರೆ ಇಲ್ಲ.

ಅಧ್ಯಕ್ಷರು—ಅಧ್ಯಕ್ಷರು ತಮ್ಮ ರಿಯಾಯಿತಿಗಳನ್ನು ಕೇಳುವುದಿಲ್ಲ. ನಿಮ್ಮ ನಾಯಕರು ಹೇಳುತ್ತಿದ್ದಾರೆ ಅವರು ಮಾತನಾಡಲಿ.

SRI M VEERAPPA MOILY.—Sir, the Hon'ble Member might heve said the words very mildly. But it amounts to casting aspersions on the Chair. This is a deliberate attempt to expose the House and trying to get certain exclusive attention as far as that member is concerned. It cannot be done. It is a threat, whether it is a mild threat or an ironical threat. Threat is a threat. This sort of threat cannot be administered against the Hon'ble Speaker.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಮಾತನಾಡುವ ಸ್ಟೈಲ್ ಹಾಗಿದೆ.

ಶ್ರೀ ಜೆ. ಹೆಚ್. ಪಟೇಲ್.—ಸಾರ್ವಜನಿಕರ ಹಿತದೃಷ್ಟಿಯಿಂದ ಮುಖ್ಯವಾದ ಯಾವುದೇ ನಿರ್ದಿಷ್ಟವಾದ ವಿಷಯವನ್ನು ಒಂದು ನಿರ್ದಿಷ್ಟವಾದ ಕಾಲವಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ೫೯ ರಲ್ಲಿ ಏನಿದೆ ಎಂದರೆ ಸಾರ್ವಜನಿಕರ ಹಿತದೃಷ್ಟಿಯಿಂದ ಬಹಳ ಮುಖ್ಯವಾದ ವಿಷಯವನ್ನು ಒಂದು ನಿರ್ದಿಷ್ಟವಾಗಿ ಇಷ್ಟೇ ಕಾಲದಲ್ಲಿ ಚರ್ಚೆ ಮಾಡಿ ಮುಗಿಸಬೇಕೆಂದು ಕಾಲವನ್ನು ನಿಗದಿ ಮಾಡಿಲ್ಲ. ಆದರೆ ವಿಧಿನಿಯಮ ೫೦ ರ ಪ್ರಕಾರ ನಿಲುವಳಿ ಸೂಚನೆಯನ್ನು ೨ ಗಂಟೆಯ ಒಳಗೆ ಚರ್ಚೆ ಮಾಡಿ ಮುಗಿಸಬೇಕೆಂದಿದೆ. ಈ ವಿಷಯದ ಬಗ್ಗೆ ಶ್ರೀಮಾನ್ ಶ್ರೀನಿವಾಸ್‌ರವರು ಮತ್ತು ರಾಮಸ್ವಾಮಿಯವರು ಮುಖ್ಯವಾದ ಎಲ್ಲಾ ವಿಷಯಗಳನ್ನು ಬಿಟ್ಟು ಚರ್ಚೆ ಮಾಡುವುದಕ್ಕೆ ಮುಖ್ಯಾಂಶ ಏನಿದೆ ಎಂದರೆ ಅದನ್ನು ಚರ್ಚೆ ಮಾಡಿದ ಮೇಲೆ ಆ ವಿಷಯದ ಬಗ್ಗೆ ಅಂತಿಮ ತೀರ್ಮಾನಕ್ಕೆ ಬಂದ ಮೇಲೆ ಈ ಸಭೆಯು

ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ೫೦ ರ ಕೆಳಗಡೆ ಅಡ್ಜರ್ನ್‌ಮೆಂಟ್ ಮೋಷನ್ ೫೯ ರಲ್ಲಿ ಚರ್ಚೆ ಮಾಡಿ ಕೆಳಗೆ ಬರುವುದಕ್ಕೆ ಸಾಧ್ಯವಿಲ್ಲ. ರಾಜ್ಯಾಂಗದ ದೃಷ್ಟಿಯಿಂದ ೫೦ ರ ಕೆಳಗೆ ಈ ವಿಷಯವನ್ನು ಪ್ರಸ್ತಾಪ ಮಾಡಿ ಈ ನಿಲುವಳಿ ಸೂಚನೆಯನ್ನು ಪಾಸು ಮಾಡಿದಾಗ ನೋ ಕಾನ್ಫಿಡೆನ್ಸ್ ಮೋಷನ್ ಪಾಸಂ ಆದ ಹಾಗೆ ಆಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಪಾಸು ಆದರೆ.

ಶ್ರೀ ಜೆ. ಹೆಚ್. ಪಟೇಲ್.—ಪಾಸು ಆಗಬಹುದು ಅಥವಾ ಆಗದೇ ಇರಬಹುದು. ಆ ಹಂತಗಳಲ್ಲಿ ಕೆಲವು ವ್ಯತ್ಯಾಸಗಳು ಇವೆ. ೫೦ ನೇ ವಿಧಿ ನಿಯಮದ ಪ್ರಕಾರ ಇಷ್ಟೇ ಕಾಲ ಚರ್ಚೆ ಮಾಡಿ ಮುಗಿಸಬೇಕೆಂದಿದೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಮುಖ್ಯವಾಗಿ ನಾವು ಇದನ್ನು ನೋಡುತ್ತಿದ್ದೇವೆ. ರಾಜ್ಯಾಂಗದಲ್ಲಿ ಈ ಪ್ರಕಾರ ಪ್ರಿಂಟ್ ಆಗದ ರೂಲ್ಸ್‌ನ್ನು ನಾವು ಅನುಸರಿಸುತ್ತಿದ್ದೇವೆ. ಇದಕ್ಕೆ ಒಂದು ಸತ್‌ಸಂಪ್ರದಾಯ ಇದೆಯೆಂದು ಹೇಳುತ್ತೇನೆ. ಆ ಸತ್‌ಸಂಪ್ರದಾಯವನ್ನು ನಾವು ಬಿಟ್ಟಿಲ್ಲ. ಆದರ ಪ್ರಕಾರ ಯಾರಾದರೂ ಒಬ್ಬ ಮಂತ್ರಿಯ ಮೇಲೆ ಯಾರಾದರೂ ದೂರು ಹೊರಿಸಿದರೆ ಅವರೇ ಸ್ವತಃ ರಾಜೀನಾಮೆಯನ್ನು ಕೊಡಬೇಕು, ಸರ್ಕಾರಿ ಅಧಿಕಾರಿಗಳು ಅಂತಹವರ ಮೇಲೆ ಆಪಾದನೆ ಬಂದಿದೆಯೆಂದು ಹೇಳಿದಾಗ ಅವರಿಗೇನಾದರೂ ಸತ್‌ಸಂಪ್ರದಾಯದ ಕಲ್ಪನೆ ಇದ್ದರೆ ಅವರು ತಮ್ಮ ಮಂತ್ರಿ ಪದವಿಗೆ ರಾಜಿನಾಮೆಯನ್ನು ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಡಿ ಎಂದು ಕೇಳುವುದಕ್ಕೆ ಮುಂಚೆ ರಾಜೀನಾಮೆಯನ್ನು ಕೊಡಬೇಕು. ಆದರೆ ಅವರು ನನ್ನ ಮೇಲೆ ಆಪಾದನೆ ಬಂದಿದೆ ಸಾರ್ವಜನಿಕರ ಹಿತದೃಷ್ಟಿಯಿಂದ ನಾನು ಈಗ ರಾಜೀನಾಮೆಯನ್ನು ಕೊಡುತ್ತೇನೆ. ನ್ಯಾಯಾಲಯದಲ್ಲಿ ನಾನು ನಿರಪರಾಧಿ ಎಂದು ತೀರ್ಮಾನ ಮಾಡಿದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ನನ್ನನ್ನು ಮಂತ್ರಿ ಮಂಡಲಿಗೆ ಸೇರಿಸಿಕೊಳ್ಳಲಿ ಎಂದು ಸೌಜನ್ಯದಿಂದ ರಾಜಿನಾಮೆಯನ್ನು ಕೊಡಬೇಕಾಗಿತ್ತು. ಆ ಒಂದು ಸೌಜನ್ಯ ಸತ್‌ಸಂಪ್ರದಾಯದ ಕಲ್ಪನೆ ಇಲ್ಲ ಎಂದರೆ ರಾಜ್ಯದ ಮುಖ್ಯ ಮಂತ್ರಿಗಳಿಗಾದರೂ ಸತ್‌ಸಂಪ್ರದಾಯದ ಕಲ್ಪನೆ ಇರಬೇಕು. ಒಂದು ಕಡೆ ಒಬ್ಬ ಹೆಂಗಸು ತನ್ನ ಮೇಲೆ ಆಪಾದನೆ ಮಾಡಿರುವಾಗ ಅದು ನ್ಯಾಯಾಲಯದಲ್ಲಿ ಇರುವಾಗ ಅಂತಹ ಮಂತ್ರಿಗಳನ್ನು ಮಂತ್ರಿಮಂಡಲದಲ್ಲಿ ಇಟ್ಟು ಕೊಳ್ಳಬಾರದು. ಕೋರ್ಟಿನಲ್ಲಿ ತಪ್ಪಿತಸ್ಥನಲ್ಲ ಎಂದು ತೀರ್ಮಾನವಾಗುವ ತನಕ ಮಂತ್ರಿ ಮಂಡಲದ ಹೊರಗಡೆ ಇರಬೇಕು. ಹಿಂದೆ ಕೂಡ ನಮ್ಮ ರಾಜ್ಯದ ಇತಿಹಾಸದಲ್ಲಿ ಹಿಂದಿನ ಮುಖ್ಯ ಮಂತ್ರಿಗಳು ಇದೇ ರೀತಿಯಾಗಿ ಮಾಡಿದ್ದಾರೆ,

೩-೦೦ ಪಿ.ಎಂ.

ಈ ಮೊದಲಿನ ಮುಖ್ಯ ಮಂತ್ರಿಗಳು ತಮ್ಮ ಸಹೋದ್ಯೋಗಿಗಳ ಮೇಲೆ ಆಪಾದನೆಗಳು ಬಂದಾಗ, ಆ ಬಗ್ಗೆ ಜನರ ಮನಸ್ಸಿನಲ್ಲಿ ಇದ್ದಂಥ ಸಂದೇಹಗಳು ನಿವಾರಣೆಯಾಗುವವರೆಗೆ ಅವರನ್ನು ಮಂತ್ರಿಮಂಡಲದಿಂದ ಹೊರಗೆ ಇಟ್ಟಿದ್ದರು. ಈ ಒಂದು ದೃಷ್ಟಿಯಿಂದ ನಾವು ಈ ಮಂತ್ರಿಯವರ ಬಗ್ಗೆ ಬಂದಿರುವ ಆಪಾದನೆ ಬಗ್ಗೆ ಚರ್ಚೆ ಮಾಡಲು ತಮ್ಮ ಅನುಮತಿ ಕೇಳುತ್ತಿದ್ದೇವೆ. ತಾವು ನಿಯಮ ೫೯ರ ಬದಲು ೫೦ರ ಪ್ರಕಾರ ಅನುಮತಿ ಕೊಟ್ಟರೆ ನಾವು ಈ ಮಂತ್ರಿಯವರು ಅಧಿಕಾರ ವಹಿಸಿಕೊಂಡ ಮೇಲೆ ಏನೇನು ನಡೆಯಿತು ಅದೆಲ್ಲವನ್ನು ಹೇಳುವುದಕ್ಕೆ ನಾವು ಹೋಗುವುದಿಲ್ಲ. ಇತ್ತೀಚೆಗೆ ನಡೆದ ವಿಷಯಗಳ ಬಗ್ಗೆ ಮಾತ್ರ ಹೇಳುತ್ತೇವೆ. ಮುಖ್ಯವಾಗಿ ಇವರು ಮಂತ್ರಿಮಂಡಲದಲ್ಲಿ ಮುಂದುವರೆಯುವ ಬಗ್ಗೆ ನಮ್ಮ ಆಕ್ಷೇಪವಿದೆ. ಮತ್ತು ಸರ್ಕಾರದ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡಿದ್ದಕ್ಕೆ ತಾವು ಶಿಕ್ಷೆ ವಿಧಿಸಿದ್ದೀರಿ. ಈ ಎರಡು ವಿಷಯಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. There are two subjects, one is, continuance of the Minister in the Cabinet and the other is, rescinding the order, ಆದಕಾರಣ ಈ ಎರಡು ವಿಷಯಗಳ ಬಗ್ಗೆ ಒಂದು ಖಚಿತವಾದ ಅಭಿಪ್ರಾಯಕ್ಕೆ ಈ ಸಭೆ ಬರಬೇಕೆಂಬ ಕಾರಣದಿಂದ ಈ ಸೂಚನೆಯನ್ನು ತಂದಿದ್ದೇವೆ ಈ ವಿಷಯದಲ್ಲಿ ಬರೀ ಚರ್ಚೆ ಮಾಡಬೇಕೆಂಬುದೇ ನಮ್ಮ ಮುಖ್ಯ ಉದ್ದೇಶವಾಗಿಲ್ಲ. ಈಗಲೂ ಸಹ ನಮ್ಮ ಮುಖ್ಯಮಂತ್ರಿಗಳು ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ಒಂದು ಸತ್ ಸಂಪ್ರದಾಯವನ್ನು ಅನುಸರಿಸುವುದಾದರೆ, ಪ್ರಜಾಪ್ರಭುತ್ವದ ಬಗ್ಗೆ ಏನಾದರು ಗೌರವವಿದ್ದರೆ ನಾವು ಹೇಳಿದ್ದನ್ನು ಒಪ್ಪಿ ಕೊಂಡರೆ ಸಾಕು. ಇದರ ಬಗ್ಗೆ ಚರ್ಚೆ ಮಾಡುವುದೇ ಬೇಡ. ಅವರನ್ನು ಮಂತ್ರಿಮಂಡಲದಿಂದ ತೆಗೆದುಹಾಕುತ್ತೇನೆಂದು ಹೇಳಿದರೆ, ಇಲ್ಲಿ ಚರ್ಚೆ ಮಾಡುವುದೇ ಬೇಡ. ಇಲ್ಲಿ ನಾವು ಕೆಲವು ನಿರ್ದಿಷ್ಟ

ಉದ್ದೇಶಗಳಿಂದ ೫೦ನೇ ನಿಯಮದ ಪ್ರಕಾರ ಈ ಸೂಚನೆಯನ್ನು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದುಕೊಂಡು ತಂದಿದ್ದೇವೆ. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ

ಅಧ್ಯಕ್ಷರು.—ಅದರಲ್ಲಿ ಇರತಕ್ಕ ವಿಷಯಗಳನ್ನು ಇಲ್ಲಿ ಹೇಳುವುದರಿಂದ ಇನ್‌ವೆಸ್ಟಿಗೇಷನ್‌ಗೆ ತೊಂದರೆಯಾಗುತ್ತೆ. ಸರ್ಕಾರ ಎಫ್.ಐ.ಆರ್. ಫೈಲ್ ಮಾಡಿದ ಮೇಲೆ......

SRI D. DEVARAJ URS.—Whether it is an investigation or FIR what is likely to effect that investigation is the issue here. You are kind enough to mention "ಇನ್‌ವೆಸ್ಟಿಗೇಷನ್‌ಗೆ ತೊಂದರೆಯಾಗಬಹುದೆಂದು" ಹೇಳಿದಿರಿ. It is exactly our submission. When the Minister is in Government don't you think that investigation will be hampered by this presence in the Cabinet and don't you think the same Minister has stated in the press demning everything ? Here the FIR case has been filed and he Minister denies everything even before the Court takes up the case. That means, does it not imply that the Minister has the capacity to influence the case when he has already come out with the statement in the press ? This is exactly the point.

ಅಧ್ಯಕ್ಷರು.—ಪೋಲೀಸ್ ಕೆಲಸ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಕಂಡಮ್ ಮಾಡುವುದು ಸರಿಯಲ್ಲ.

SRI D. DEVARAJ URS.—That is not the point, The situation here is the Minister who is a party in the Cabinet is involved. ಕೆಲಸ ಮಾಡುವುದಿಲ್ಲ ಎನ್ನುವುದು ಏತಕ್ಕೆ. ಸಾಮಾನ್ಯ ಪ್ರಜೆಯಾಗಿದ್ದರೆ, ಈ ವಿಷಯ ಬರುತ್ತಿರಲಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯೊಬ್ಬರು ಇನ್‌ವಾಲ್ವ್ ಆಗಿರುವುದರಿಂದ, ಅವರ ಮೇಲೆ ಸರ್ಕಾರವೇ ಕೇಸ್ ಹಾಕಿರುವಾಗ, ಅವರು ಮಂತ್ರಿಮಂಡಲದಲ್ಲಿರುವುದು ಸರಿಯಲ್ಲ. ನಾವು ಎಷ್ಟು ಹೇಳಬಹುದು, ನಿಮಗೆ ಬಿಟ್ಟ ವಿಷಯ. The Minister is involved and he may influence You will kindly consider this aspect, It is not as if we are against X or Y. In a situation like this where you are the custodian of this House and rules and regulations, it is for your kind consideration that we are submiting all these things:

ಶ್ರೀ ಪಿ. ರಾಮದೇವ್.—ಸ್ವಾಮಿ, ಇವರಲ್ಲಿ ನನ್ನ ರೀಡಿಂಗ್ ಪ್ರಕಾರ ಸರ್ಕಾರದವರು ಈಗ ಏನೊಂದು ಸೀರೀಸ್ ಆಫ್ ಆ್ಯಕ್ಷನ್ಸ್ ತೆಗೆದುಕೊಂಡಿದ್ದಾರೆ ಇದು ಆಪಾದನೆಗೆ ಒಳಗಾಗಿರತಕ್ಕ ಮಂತ್ರಿಯವರನ್ನು ನಮ್ಮ ಮುಖ್ಯ ಮಂತ್ರಿಗಳವರು ಷೀಲ್ಡ್ ಮಾಡುತ್ತಿದ್ದಾರೆಂದು ಹೇಳಬಯಸುತ್ತೇನೆ. ನಾನು ಏತಕ್ಕೆ ಈಮಾತನ್ನು ಹೇಳುತ್ತಿದ್ದೇನೆಂದರೆ ಎಫ್.ಐ.ಆರ್.ಫೈಲ್ ಮಾಡಿದ ನಂತರ ಚಾರ್ಜ್‌ಷೀಟ್ ಹಾಕಿದಾಗಲೇ ಈ ಮಂತ್ರಿಯವರನ್ನು ಅರೆಸ್ಟ್ ಮಾಡಬೇಕಾಗಿತ್ತು. ಸರ್ಕಾರ ತನ್ನ ಅಧಿಕಾರದಲ್ಲಿ ಒಬ್ಬ ಹಿಂದೂ ಮಹಿಳೆಯನ್ನು ಅರೆಸ್ಟ್ ಮಾಡಿದ್ದು ಆಕೆಯ ಗೌರವಕ್ಕೆ ಧಕ್ಕೆ ತಂದಿದ್ದು ಸರಿಯಲ್ಲ. ಈ ರೀತಿ ಮಾಡಿರುವುದರಿಂದ ಹೊರಗಡೆ ಇರತಕ್ಕ ಜನ ಬಹಳ ಉದ್ರೇಕಪೂರಿತರಾಗಿದ್ದಾರೆ. ಆಪಾದನೆಗೆ ಒಳಗಾಗಿರತಕ್ಕ ಮಂತ್ರಿಯನ್ನು ಆ ಸ್ಥಾನದಲ್ಲಿಯೇ ಇಟ್ಟುಕೊಂಡು ಪೋಲೀಸ್ ಅಧಿಕಾರಿಗಳಲ್ಲಿ ಒಬ್ಬರನ್ನು ರಜಾದಮೇಲೆ ಹೋಗುವಂತೆ ಹೇಳಿದ್ದು, ಇನ್ನೊಬ್ಬ ಅಧಿಕಾರಿಯನ್ನು ಆ ಸ್ಥಳದಿಂದ ಬೇರೆ ಕಡೆಗೆ ವರ್ಗಾವಣೆ ಮಾಡಿದ್ದು ಸರಿಯಲ್ಲ, ನೀವು ಈ ಮಂತ್ರಿಯಿಂದ ಏತಕ್ಕೆ ರಾಜೀನಾಮೆಯನ್ನು ತೆಗೆದುಕೊಳ್ಳಲಿಲ್ಲ ? ಮತ್ತು ಏತಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ ? ಮಾನ್ಯ ಮುಖ್ಯಮಂತ್ರಿಯವರು ೧೪ರ ಜೂನ್ ಸಂಡೆ ಪತ್ರಿಕೆಯಲ್ಲಿ ಏನು ಹೇಳಿಕೆ ನೀಡಿದ್ದಾರೆಂಬುದನ್ನು ಇಲ್ಲಿ ಹೇಳಬಯಸುತ್ತೇನೆ. ಅದು ಈ ರೀತಿ ಇದೆ :

"If she does not give me an interview half of my Cabinet colleagues will leave me, they will catch the flight to Delhi to back some-one else."

ಈಗ ನಾನು ಅದನ್ನು ಜ್ಞಾಪಕ ಮಾಡಿಕೊಡುತ್ತಿದ್ದೇನೆ......

ಅಧ್ಯಕ್ಷರು.—ನೀವು ಎತ್ತಿರುವ ರೂಲ್ ೫೦ರ ಕೆಳಗೆ ಇದು ಬರುತ್ತಿದೆಯೆ ?

ಶ್ರೀ ಪಿ. ರಾಮದೇವ್.—ಸ್ವಾಮಿ, ನಾನು ನಿರ್ದಿಷ್ಟವಾದ ವಿಚಾರವನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಇದೇ ಅಲ್ಲದೆ ಇನ್ನೊಂದು ಮುಖ್ಯ ವಿಚಾರ ಏನೆಂದರೆ ನಮ್ಮ ಪೋಲೀಸ್ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿದ್ದಾರೆಂದು ಹೇಳುತ್ತೇವೆ, ಇಲ್ಲದಿದ್ದರೆ ಇಲ್ಲವೆಂದು ಹೇಳಬೇಕಾಗುತ್ತದೆ.......

Mr. Speaker.—Please don't try to deviate from the issue......

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೆ ಸರಿಯಾಗಿ ಕೆಲಸ ಮಾಡತಕ್ಕ ಪೋಲೀಸ್ ಅಧಿಕಾರಿಗಳನ್ನು ಹೋಂ ಸೆಕ್ರೆಟರಿಯವರಾದ ಮೋಸಸ್‌ರವರು ಕರೆಸಿ ನೀವು ರಜಾದಮೇಲೆ ಹೋಗಿ ಎಂದು ಹೇಳಿದ್ದಾರೆ. ಆದರೆ ಈ ಮೋಸಸ್‌ರವರು ಜನರಿಗೆ ಈ ರೀತಿ ಮೋಸ ಮಾಡಬಾರದು. ನಿಜಾಮುದ್ದೀನ್ ಸಾಹೇಬರು ನಿಜವನ್ನು ಹೇಳಬೇಕು ಇಲ್ಲದೇ ಹೋದರೆ ರಾಜ್ಯದ ಜನತೆಯ ಮನಸ್ಸಿನಲ್ಲಿ ತಪ್ಪು ಅಭಿಪ್ರಾಯ ಮೂಡುತ್ತದೆ.

Mr. Speaker.—They are not the Members of this House. You are not supposed to name the persons who cannot defend themselves. There are precedents about this......

ಶ್ರೀ ಪಿ. ರಾಮದೇವ್.—ಪತ್ರಿಕೆಯಲ್ಲಿ ಬಂದಿದೆ......

Mr. Speaker.—I would suggest to Sri Bommai, Leader of the Janata Party to have some control over the Members of his party. Now, let us follow one rule. Let us follow the books or let us follow the precedents and conventions laid down by this House. Or else let us go in our own way. I would suggest to the Hon. Member not to name the persons who are not in a position to defend themselves......

Sri Azeez Sait.—Sir, what Sri Ramdev just now pleaded before us. ಯಾರು ಮೋಸ ಮಾಡಿದರು ? ನಿಜ ಹೇಳಲಿ. ಪತ್ರಿಕೆಯಲ್ಲಿ ಬಂದಿವೆ. Neither the Police Commissioner contradicted the statement nor the Home Secretary did it.

Mr. Speaker.—Do you want them to go to the Press ?

ಶ್ರೀ ಪಿ. ರಾಮದೇವ್.—ಎಲ್ಲಿ ಚೆನ್ನಾಗಿ ಕೆಲಸ ಮಾಡುತ್ತಾರೆ ಅದನ್ನು ನಾವು ಶ್ಲಾಘನೆ ಮಾಡುತ್ತೇವೆ. ಅದಿಲ್ಲದೆ ಎಲ್ಲಿ ಚೆನ್ನಾಗಿ ಕೆಲಸ ಮಾಡುವುದಿಲ್ಲ ಅದನ್ನು ನಾವು ಎತ್ತಿಹಿಡಿದು ಹೇಳಬೇಕಾಗುತ್ತದೆ ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈಗ ಸಭೆಯ ಮುಂದೆ ಬಂದಿರತಕ್ಕ ವಿಚಾರ ಏನಿದೆ ಇದನ್ನು ಪೂರ್ತಿಯಾಗಿ ಚರ್ಚೆಮಾಡುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೆ, ಸರಿಯಾದ ಆಡಳಿತವನ್ನು ನಡೆಸಬೇಕಾದ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ. ಸಾಮಾನ್ಯ ಪ್ರಜೆಗಳ ಮೇಲೆ ಅತ್ಯಾಚಾರ, ಅನ್ಯಾಯಗಳಾದಾಗ ಅವರು ಬಂದು ರಕ್ಷಣೆ ಕೊಡಬೇಕೆಂದು ಕೇಳಿದಾಗ, ಅಲ್ಲಿ ಅನ್ಯಾಯ, ಅತ್ಯಾಚಾರಗಳು ಆಗಿವೆಯೇ ಇಲ್ಲವೇ ಎಂಬುದನ್ನು ನೋಡಿ ನ್ಯಾಯಬದ್ಧವಾಗಿ ರಕ್ಷಣೆ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ. ಅಂಥ ಸಂದರ್ಭದಲ್ಲಿ ರಕ್ಷಣೆ ಕೊಡಲು ಹೋದ ಪೋಲೀಸ್‌ರ ಮೇಲೆ ಅಥವಾ ಪೋಲೀಸ್ ಆಫೀಸರ್‌ಗಳ ಮೇಲೆ ಮಂತ್ರಿಮಂಡಲದಲ್ಲಿರತಕ್ಕ ಅಥವಾ ಮಂತ್ರಿಮಂಡಲದ ಕೈ ಕೆಳಗಿರತಕ್ಕ ಅಧಿಕಾರಿಗಳು ಯಾರಿದ್ದಾರೆ ಅವರು ಈ ಪೋಲೀಸರ ಮೇಲೆ ಕ್ರಮ ತೆಗೆದುಕೊಂಡು ಒಬ್ಬರನ್ನು ರಜಾದಮೇಲೆ ಹೋಗಿ ಎಂದು ಹೇಳಿದ್ದು ಇನ್ನೊಬ್ಬರನ್ನು ಅವರ ಸ್ಥಾನದಿಂದ ಬೇರೆಕಡೆಗೆ ವರ್ಗಮಾಡಿದ್ದು ಸರಿಯಲ್ಲ. ಶಾಸಕಾಂಗ ಏನು ಕಾನೂನು ಮಾಡಿದೆ ಅದರ ಪ್ರಕಾರ ಕಾರ್ಯಾಂಗ ಕೆಲಸ ಮಾಡಿದೆಯೆ ? ಇಲ್ಲವೇ ? ಎಂಬುದನ್ನು ನೋಡಬೇಕು. ಈಗ ಈ ಸಭೆಯ ಮುಂದೆ ನಾವು ಏನು ನಿಲುವಳಿ ಸೂಚನೆಯನ್ನು

ತಂದಿದ್ದೇವೆ ಅದನ್ನು ಚರ್ಚೆಮಾಡುವುದಕ್ಕೆ ತಾವು ಅವಕಾಶವನ್ನು ದಯವಿಟ್ಟು ಮಾಡಿಕೊಡಬೇಕು. ಇಲ್ಲದಿದ್ದರೆ ಹೊರಗಡೆ ಇರತಕ್ಕ ಜನರು ತಾವೇ ಒಂದು ತೀರ್ಮಾನವನ್ನು ತಗೆದುಕೊಳ್ಳಬೇಕಾಗುತ್ತದೆ.

ಇನ್ನು ಎರಡನೆಯದಾಗಿ ಆಪಾದನೆಗೆ ಒಳಗಾಗಿರತಕ್ಕ ಮಂತ್ರಿಯಮೇಲೆ ಪೋಲೀಸ್ ಅಧಿಕಾರಿ ಯೊಬ್ಬರು ಕ್ರಮ ತೆಗೆದುಕೊಳ್ಳುವುದಕ್ಕೆ ಹೋದಾಗ ಆ ಅಧಿಕಾರಿಯ ಮೇಲೆಯೇ ನೀವು ಕ್ರಮ ತೆಗೆದು ಕೊಂಡು ಆತನನ್ನು ಬೇರೆ ಕಡೆಗೆ ವರ್ಗಮಾಡಿದರೆ ಇನ್ನು ಆತನ ಜಾಗಕ್ಕೆ ಬೇರೆ ಅಧಿಕಾರಿ ಬಂದು ಅಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಎಷ್ಟರಮಟ್ಟಿಗೆ ಅದನ್ನು ರುಜುವಾತು ಮಾಡುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಯಾವ ಮಂತ್ರಿಯಮೇಲೆ ಆಪಾದನೆಗಳು ಬಂದಿವೆ ಅವರನ್ನು ಮೊದಲು ಆ ಸ್ಥಾನದಿಂದ ಹೊರಗಡೆ ಹಾಕಬೇಕು. ಆಗ ಮಾತ್ರ ಇದು ಸರಿಹೋಗುತ್ತದೆ. ಈ ವಿಚಾರದಲ್ಲಿ ಇವತ್ತು ನಮ್ಮ ರಾಜ್ಯಾಂಗ ತಪ್ಪು ಮಾಡಿದೆ. ಯಾವ ಮಹಿಳೆಗೆ ನ್ಯಾಯ ದೊರೆಯಬೇಕಾಗಿತ್ತೋ ಅದು ದೊರೆತಿಲ್ಲ. ಇಂಥ ಗಹನವಾದ ವಿಚಾರ ಈಗ ಸಭೆಯ ಮುಂದಿರುವುದರಿಂದ ತಾವು ದಯವಿಟ್ಟು ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಗಳು ಈ ನಿಲುವಳಿ ಸೂಚನೆಯ ಮೇಲೆ ಮಾತನಾಡಿದ್ದಾರೆ. ನಾವು ಸಾಮಾನ್ಯವಾಗಿ ನೋಡುತ್ತಿರು ವಂತೆ ಯಾರಾದರೂ ಒಬ್ಬ ಕಸ ಗುಡಿಸುವವನು ಒಂದು ಸಣ್ಣ ತಪ್ಪನ್ನು ಮಾಡಿದರೆ ಕೂಡಲೇ ಆತನನ್ನು ಪೆಂಡಿಂಗ್ ಎನ್‌ಕ್ವೈರಿ ಎಂದು ಸಸ್ಪೆಂಡ್ ಮಾಡುತ್ತೀರಿ ಆನಂತರ ಆತನು ತಪ್ಪು ಮಾಡಿದ್ದಾನೆಯೇ ? ಇಲ್ಲವೇ ಎಂಬುದನ್ನು ವಿಚಾರಣೆ ಮಾಡಿ, ಆತನು ತಪ್ಪಿತಸ್ಥ ಅಲ್ಲ ಎಂದು ತಿಳಿದುಬಂದರೆ ಮಾತ್ರ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುತ್ತೀರಿ. ಆದರೆ ಇಲ್ಲಿ ನಮ್ಮ ಮಂತ್ರಿಗಳ ಮೇಲೆ ಕೋರ್ಟಿನಲ್ಲಿ ಕಟ್ಟಳೆ ಹಾಕಿದ್ದರೂ ಅವರನ್ನು ಇನ್ನೂ ಆ ಸ್ಥಾನದಲ್ಲಿಯೇ ಇಟ್ಟುಕೊಂಡಿರುವುದು ಸರಿಯಲ್ಲ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಏತಕ್ಕೆ ಸುಮ್ಮನಿದ್ದಾರೋ ನಮಗಂತೂ ಗೊತ್ತಾಗುತ್ತಿಲ್ಲ. ನಾನು ಅತ್ಯಂತ ನಿಷ್ಠೆ ಯಿಂದ ಕೆಲಸಮಾಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿ ಕೊಳ್ಳುತ್ತಿರುತ್ತಾರೆ. ಆದರೆ ಈ ಒಂದು ವಿಚಾರದಲ್ಲಿ ಏತಕ್ಕೆ ಸುಮ್ಮನಿದ್ದಾರೊ ಗೊತ್ತಿಲ್ಲ. ಈಗಾಗಲೇ ಇದೇರೀತಿ ಆಪಾದನೆಗೆ ಒಳಗಾಗಿ ತಕ್ಕ ಒಬ್ಬ ಮಂತ್ರಿಯವರು ತಮ್ಮ ರಾಜೀನಾಮೆಯನ್ನು ನೇರವಾಗಿ ಮುಖ್ಯಮಂತ್ರಿಯವರಿಗೆ ಕೊಟ್ಟಿರ ದ್ದಾರೆ. ಸರ್ಕಾರೀ ಅಧಿಕಾರಿಗಳಮೇಲೆ ನಡೆಸುತ್ತಿರುವ ದಬ್ಬಾಳಿಕೆ ನಿಲ್ಲಬೇಕು. ಇಲ್ಲದೇ ಹೋದರೆ ಯಾವ ಅಧಿಕಾರಿಗಳೂ ಸಹ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ ಇನ್ನು ಮುಂದೆ ಇನ್ನು ದೊಡ್ಡ ದೊಡ್ಡ ಘರ್ಷಣೆಗಳು ಆದರೂ ಆಗಬಹುದು. ಅದಕ್ಕೆಲ್ಲಾ ಅವಕಾಶವಾಗದಂತೆ ಈಗ ಯಾವ ಮಂತ್ರಿಯ ಮೇಲೆ ಆಪಾದನೆ ಬಂದಿದೆ ಅವರನ್ನು ಮಂತ್ರಿಮಂಡಲದಿಂದ ಹೊರಗಡೆ ಇಟ್ಟು ಅವರಮೇಲೆ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಲು ಇವತ್ತು ಸಭೆಯಮುಂದೆ ಏನೊಂದು ನಿಲುವಳಿ ಸೂಚನೆಯನ್ನು ನಾವು ಮಂಡಿಸಿದ್ದೇವೆ. ಇದನ್ನು ಸಂಪೂರ್ಣವಾಗಿ ಚರ್ಚೆಮಾಡಲು ತಾವು ದಯವಿಟ್ಟು ಅವಕಾಶ ಮಾಡಿಕೊಡ ಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಡಾ. ಎಚ್. ಎಲ್. ತಿಮ್ಮೇಗೌಡ (ಬಸವನಗುಡಿ).— ಮಾನ್ಯ ಅಧ್ಯಕ್ಷರೇ ಈಗ ಆಗಿರತಕ್ಕಂಥ ಘಟನೆ ರಾಜ್ಯದಲ್ಲಿ ಎಲ್ಲರಿಗೂ ಕೂಡ ಮನಸ್ಸಿಗೆ ವ್ಯಥೆಯನ್ನು ತರತಕ್ಕಂಥ ಘಟನೆಯಾಗಿರುತ್ತದೆ. ಇದರಲ್ಲಿ ವ್ಯಥೆಯನ್ನು ತರತಕ್ಕಂಥ ಸಮಸ್ಯೆಯಾಗಿದ್ದು ಮಂತ್ರಿಗಳ ಮೇಲೆಯೇ ಒಂದು ಗುರುತರವಾದ ಆಪಾ ದನೆ ಬಂದಿರುತ್ತದೆ. ಕೇಸ್ ಹಾಕಿದ್ದಾರೆಂದು ಮಾನ್ಯ ಅಧ್ಯಕ್ಷರೇ, ತಮಗೆಲ್ಲ ಗೊತ್ತೇ ಇರುತ್ತದೆ. ಶ್ರೀಮಾನ್ ಗುಂಡೂರಾಯರು ಸರ್ಕಾರವನ್ನು ವಹಿಸಿಕೊಂಡಮೇಲೆ ಬಹಳ ಜನ ಅಧಿಕಾರಿಗಳ ಮನೆ ಗಳನ್ನು ಸರ್ಚ್ ಮಾಡಿಸಿದ್ದಾರೆ. ಆ ಎಲ್ಲ ಅಧಿಕಾರಿಗಳನ್ನು ಸಸ್‌ಪೆಂಡ್‌ಮಾಡಿದ್ದಾರೆ. ಏತಕ್ಕೆ ಸಸ್‌ಪೆಂಡ್ ಮಾಡಿರುತ್ತಾರೆಂದರೆ. ಅವರು ಅಧಿಕಾರದಲ್ಲಿ ಉಳಿದುಕೊಂಡಿದ್ದರೆ ಇನ್‌ವೆಸ್ಟಿಗೇಷನ್ ಕಾಲದಲ್ಲಿ ರೆಕಾರ್ಡ್‌ಗಳನ್ನು ಟ್ಯಾಂಪರ್ ಮಾಡಬಹುದು ಎಂಬ ಉದ್ದೇಶದಿಂದ ಅವರನ್ನು ಸಸ್‌ಪೆಂಡ್ ಮಾಡಿರು ತ್ತಾರೆ. ಅವರ ಕೈಕೆಳಗೆ ಇರುವ ಅಧಿಕಾರಿಗಳಮೇಲೆ ಪ್ರಭಾವ ಬೀರಿ ಇನ್‌ವೆಸ್ಟಿಗೇಷನ್ ಸರಿಯಾದ ರೀತಿ ಯಲ್ಲಿ ನಡೆಸಲು ಸಾಧ್ಯವಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ಸಸ್‌ಪೆಂಡ್ ಮಾಡಿರುತ್ತಾರೆ. ಕೇಸ್ ನಿಜವಾಗಿದಿಯೋ ಇಲ್ಲವೋ ಎಂದು ಸಾಬೀತು ಮಾಡಲು ಹೈಕೋರ್ಟ್‌ಗಳಿರುತ್ತವೆ. ಕೇಸ್ ನಿಜವಿದ್ದು ಸಾಬೀತಾದರೆ ಅಂತವರನ್ನು ಡಿಸ್‌ಮಿಸ್‌ಮಾಡಬಹುದು. ಕೇಸ್ ಸುಳ್ಳಾಗಿದ್ದು ಅದು ಸಾಬೀತಾಗದೆ

ಹೋದರೆ ಅಂಥವರನ್ನು ಮತ್ತೆ ರೆಸ್ಟೋರ್ ಮಾಡಿಕೊಳ್ಳಬಹುದು. ಈರೀತಿ ಸರ್ಕಾರದ ಅಧಿಕಾರಿಗಳ ಮೇಲೆ ಆಪಾದನೆ ಮಾಡಿದಾಗ ಅವರನ್ನು ಸಸ್‌ಪೆಂಡ್ ಮಾಡುವ ಜವಾಬ್ದಾರಿಯನ್ನು ಹೊತ್ತು ಸರ್ಕಾರ ನಡೆಸತಕ್ಕಂಥ ಕಾಲದಲ್ಲಿ ಒಬ್ಬ ಮಂತ್ರಿಯಮೇಲೆ ಇಷ್ಟೊಂದು ಆಪಾದನೆಗಳು ಮಾಡಿದಮೇಲೆ ನಿಮ್ಮ ಮೇಲೆ ಬಂದಿರತಕ್ಕಂಥ ಆಪಾದನೆಗಳು ನಿಜವೋ-ಸುಳ್ಳೋ ವಿಚಾರಣೆ ಮಾಡತಕ್ಕಂಥದ್ದು ಸರ್ಕಾರದ ಕರ್ತವ್ಯವಾಗಿರುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಶ್ರೀ ಇಬ್ರಾಹಿಂರವರಿಗೆ ಹೇಳದೆ ಇರತಕ್ಕಂಥದ್ದು ನಿಜವಾಗಿಯೂ ಕೂಡ ಜನರಿಗೆ ಲೋಪ ಮಾಡಿದಂತಾಗಿದೆ ಎಂದು ನನ್ನ ಭಾವನೆಯಾಗಿರುತ್ತದೆ. ಮಾನ್ಯ ಇಬ್ರಾಹಿಮ್‌ರವರು ನಮ್ಮ ಪಕ್ಷದಲ್ಲಿಯೇ ಹಿಂದೆ ಇದ್ದವರು. ನಮ್ಮ ಅದೃಷ್ಟವೋ, ದುರಾದೃಷ್ಟವೋ ಅವರು ಮಂತ್ರಿಗಳಾದಮೇಲೆ ಈರೀತಿಯಾದ ಆಪಾದನೆಗಳು ಬಂದಿರುವುದು ನಮ್ಮೆಲ್ಲರ ಮನಸ್ಸಿಗೂ ನಿಜವಾಗಿಯೂ ವ್ಯಥೆಯನ್ನು ಉಂಟು ಮಾಡಿದೆ. ಜನತಾಪಕ್ಷದಲ್ಲಿ ಇದ್ದವರಮೇಲೆ ಇಂಥ ಒಂದು ಆಪಾದನೆ ಬಂದಿದೆ. ಅವರಮೇಲೆ ಬಂದಿರತಕ್ಕಂಥ ಆಪಾದನೆಗಳು ಆದಷ್ಟು ಜಾಗ್ರತೆಯಾಗಿ, ವಿಚಾರಣೆಯಾಗಿ, ಅವರು ನಿರಪರಾಧಿಗಳು ಎಂದು ತೀರ್ಮಾನವಾದರೆ ನಮಗೂ ಕೂಡ ಸಂತೋಷವಾಗುತ್ತದೆ. ಮಾನ್ಯ ಶ್ರೀ ಡಿ. ದೇವರಾಜ ಅರಸ್‌ರವರು ಹೇಳಿದಹಾಗೆ ಮೇಲ್ಪಟ್ಟದ ಅಧಿಕಾರಿಗಳು ಆಪಾದನೆಗೆ ಗುರಿಯಾದಾಗ ಅವರು ಅಧಿಕಾರದಲ್ಲಿಯೇ ಉಳಿದುಕೊಂಡಿದ್ದರೆ ವಿಚಾರಗಳನ್ನು ಟ್ಯಾಂಪರ್ ಮಾಡಬಹುದು. ಅವರ ಕೈಕೆಳಗಿರತಕ್ಕಂಥ ಅಧಿಕಾರಿಗಳು ಹೆದರಿಕೊಂಡು ಸಾಕ್ಷಿ ಹೇಳದೆ ಇರಬಹುದು, ಎಂದು ಹೇಳಿದಹಾಗೆ ಮಾನ್ಯ ಇಬ್ರಾಹಿಮ್‌ರವರು ಮಂತ್ರಿಗಳಾಗಿಯೇ ಮುಂದುವರಿದರೆ, ಅವರಮೇಲೆ ಇನ್‌ವೆಸ್ಟಿಗೇಷನ್ ಮಾಡಲು ಮತ್ತು ಚಾರ್ಜ್‌ಶೀಟ್ ಹಾಕಲು ಅಧಿಕಾರಿಗಳಿಗೆ ಕಷ್ಟವಾಗುತ್ತದೆ. ಅಧಿಕಾರಿಗಳು ಧೈರ್ಯದಿಂದ ಕೆಲಸಮಾಡಲು ಕಷ್ಟವಾಗುತ್ತದೆ. ಮತ್ತೊಂದು ವಿಷಯವೇನೆಂದರೆ ಶ್ರೀಮಾನ್ ಭಟ್‌ರವರನ್ನು ರಜದಮೇಲೆ ಕಳುಹಿಸಿರತಕ್ಕಂಥದ್ದು, ಸೂಪರಿನ್‌ಟೆಂಡೆಂಟ್ ಆಫ್ ಪೋಲೀಸ್ ರವರನ್ನು ೨೪ ಗಂಟೆಗಳಲ್ಲಿ ಟ್ರಾನ್ಸ್‌ಫರ್ ಮಾಡಿರತಕ್ಕಂಥದ್ದು ಜನರಿಗೆ ಅನುಮಾನ ಬರತಕ್ಕಂಥ ಪ್ರಸಂಗವಾಗಿರುತ್ತದೆ. ಈ ಒಂದು ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ, ಶ್ರೀಮಾನ್ ಇಬ್ರಾಹಿಮ್‌ರವರು ರಾಜೀನಾಮೆ ಕೊಡಲಿ ಅವರಮೇಲೆ ಬಂದಿರತಕ್ಕಂಥ ಆಪಾದನೆಗಳು ನಿಜವಲ್ಲದಿದ್ದರೆ ಮತ್ತೆ ಅವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಲಿ ನಮ್ಮ ಅಭ್ಯಂತರವೇನೂ ಇಲ್ಲ ಆದ್ದರಿಂದ ಜನತೆಯ ಹಿತದೃಷ್ಟಿಯಿಂದ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು ಎನ್ನುವ ದೃಷ್ಟಿಯಿಂದ ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಿಮ್ಮನ್ನು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಅಧ್ಯಕ್ಷರೇ ಈ ರಾಜ್ಯದಲ್ಲಿರತಕ್ಕಂಥ ಮಹಿಳೆಯರಿಗೆ ಮಾನ ಮರ್ಯಾದೆಯಿಂದ ಬಾಳಲಿಕ್ಕೆ ಅವಕಾಶ ಇದೆಯೋ ಎನ್ನುವುದು ಪ್ರಶ್ನೆಯಾಗಿದೆ. ? ಏತಕ್ಕೆಂದರೆ ನಮ್ಮ ರಾಜ್ಯದಲ್ಲಿ ಜವಾಬ್ದಾರಿಯುತವಾದ ಒಬ್ಬ ವ್ಯಕ್ತಿಯಮೇಲೆ ರಿಪೋರ್ಟ್ ಕೊಟ್ಟಮೇಲೆ ಅದಕ್ಕೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಸೂಕ್ತಕ್ರಮ ತೆಗೆದುಕೊಳ್ಳುವಾಗ ಅವರ ಮೇಲೆ ಕ್ರಮತೆಗೆದುಕೊಂಡರೆ ಇನ್ನು ಮುಂದೆ ಹೆಣ್ಣು ಮಕ್ಕಳ ಪರಿಸ್ಥಿತಿ ಏನು ಎನ್ನತಕ್ಕಂಥ ವಿಚಾರ ಪ್ರತಿಯೊಬ್ಬರ ಮನಸ್ಸಿಗೆ ಬರಲಿಕ್ಕೆ ಸಾಧ್ಯವಾಗಿರುತ್ತದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಪ್ರತಿಯೊಬ್ಬ ಸದಸ್ಯರ ಮನೆಯಲ್ಲಿಯೂ ಹೆಣ್ಣುಮಕ್ಕಳು ಇರುತ್ತಾರೆ. ಅಕ್ಕತಂಗಿಯರು ಇರುತ್ತಾರೆ. ಬಂಧುಬಳಗ ಇರುತ್ತಾರೆ. ಹೆಣ್ಣು ಮಕ್ಕಳ ಗೌರವವನ್ನು ಕಾಪಾಡತಕ್ಕಂಥದ್ದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಈ ಸದನದ ಸದಸ್ಯರು ಆ ಒಂದು ವಿಚಾರದಲ್ಲಿ ಹಿಂದೆ ಬೀಳಬಾರದು. ಆದ್ದರಿಂದ ರೂಲ್ ನಂಬರ್ ೫೧ ೫೯, ೬೦ ಎಲ್ಲದರ ಕೆಳಗೂ ಚರ್ಚೆಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟು ನಮ್ಮ ರಾಜ್ಯದಲ್ಲಿ ಹೆಣ್ಣುಮಕ್ಕಳು ಗೌರವದಿಂದ ಬಾಳಲಿಕ್ಕೆ ಅವಕಾಶವಿದೆ ಎನ್ನುವುದನ್ನು ಈ ಸದನ ರಾಜ್ಯದ ಜನತೆಗೆ ಮನದಟ್ಟು ಮಾಡಿಕೊಡಬೇಕಾಗಿದೆ ಏತಕ್ಕೆಂದರೆ ಪದ್ಮಾವತಿ ಪ್ರಕರಣ ಓದಿ ನನಗೂ ಕೂಡ ಒಂದುರೀತಿಯ ಹೆದರಿಕೆ ಆಯಿತು. ಒಬ್ಬ ದೊಡ್ಡ ವ್ಯಕ್ತಿ ಮನಸ್ಸು ಮಾಡಿದರೆ ಎಂಥ ಹೆಂಗಸಿನ ಶೀಲಹರಣ ಮಾಡಬಹುದು ಎಂಬುದು ಇದರಿಂದ ಅರ್ಥವಾಗುತ್ತದೆ. ಏತಕ್ಕೆಂದರೆ ಒಬ್ಬ ಜವಾಬ್ದಾರಿಯುತವಾದ ವ್ಯಕ್ತಿ ರಿಪೋರ್ಟ್‌ನ್ನು ಕೊಟ್ಟಿದ್ದರೂ ಅದು ಸರಿಯಲ್ಲ ತಪ್ಪು ಎನ್ನುವ ವಿಚಾರಮಾಡಿ ಕ್ರಮ ಕೈಗೊಂಡು ಬಿಟ್ಟರೆ ಇನ್ನುಮುಂದೆ ಈ ರಾಜ್ಯದಲ್ಲಿ ಹೆಣ್ಣುಮಕ್ಕಳು ಗೌರವದಿಂದ ಬಾಳುವುದೇ ಕಷ್ಟವಾಗುತ್ತದೆ. ಅಗತ್ಯವಾಗಿ ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು ಸಿದ್ಧವಾದರೆ ಯಾರಮೇಲೆ ಆಪಾದನೆ ಇರುತ್ತದೆಯೋ ಅವರಮೇಲೆ ಸೂಕ್ತಕ್ರಮ ಕೈಗೊಂಡು ರಾಜ್ಯದಲ್ಲಿ ಮಹಿಳೆ

ಯರು ಗೌರವದಿಂದ ಬಾಳಲಿಕ್ಕೆ ಅವಕಾಶ ಇದೆ ಎನ್ನುವ ಭರವಸೆಯನ್ನು ಜನತೆಗೆ ಈ ಸದನ ಮಾಡಿ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತಾ ಸೆಕ್ಷನ್ ೫೦ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ರೂಲ್‌ನಂಬರ್ ೫೦ರ ಕೆಳಗೆ ಡಿಸ್‌ಕಷನ್ ಆದಹಾಗೆಯೇ ಆಯಿತು. ಎಲ್ಲರೂ ಮಾತನಾಡಿದ ಹಾಗಾಯಿತು. ಇನ್ನು ಯಾರು ಮಾತನಾಡದೆ ಉಳಿದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಈ ಮನೆಯ ೨೨೫ ಜನ ಸದಸ್ಯರು ಮಾತನಾಡಿ ಅವರವರ ಅಭಿಪ್ರಾಯಗಳನ್ನು ಸೂಚಿಸಬೇಕಾಗಿರುತ್ತದೆ. ಇದು ಸದಸ್ಯರ ಜವಾಬ್ದಾರಿಯಾಗಿರುತ್ತದೆ. ಪ್ರತಿಯೊಬ್ಬರು ಅದರಬಗ್ಗೆ ತಮ್ಮ ನಿಲುವು ಏನು ಎನ್ನುವುದರ ಬಗ್ಗೆ ತಿಳಿಸಬೇಕಾಗಿರುತ್ತದೆ. ಆದ್ದರಿಂದ ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೇ ಹಿಂದೆ ಇದೇ ಸದನದಲ್ಲಿ......

MR. SPEAKER.—You want to imagine something and talk. That imagination, which is not in the mind of the Hon. Chief Minister

SRI MICHAEL FERNANDES.—There is a reason why I am saying. The reason is there on record. ಹಿಂದೆ ಕೆಲವು ಪ್ರಕರಣಗಳಲ್ಲಿ ಮಾನ್ಯ ಇಬ್ರಾಹಿಂರವರೇ ಹೇಳಿರುತ್ತಾರೆ, ನಾನು ಅಲ್ಪ ಸಂಖ್ಯಾತರ ಜಾತಿಗೆ ಸೇರಿದವನಾದುದರಿಂದ ನನ್ನ ವಿರುದ್ಧ ಹೇಳುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟಿರತಕ್ಕಂಥದ್ದು ಬಂದಿರುತ್ತದೆ. ಒಂದು ಅಭಿಪ್ರಾಯ ಹೇಳುವುದೇನೆಂದರೆ ವಿರೋಧ ಪಕ್ಷದಲ್ಲಿ ಯಾರ ಮನಸ್ಸಿನಲ್ಲಿಯೂ ಅವರು ಅಲ್ಪಸಂಖ್ಯಾತರು, ಅವರ ವಿರುದ್ಧ ಹೋರಾಟ ನಡೆಸಬೇಕು, ಅವರನ್ನು ತೆಗೆಸಬೇಕು ಎನ್ನುವುದು ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಅವರನ್ನು ತೆಗೆಯಲು ಏನೋ ಅಡಚಣೆ ಇರುತ್ತದೆ. ಈಗಿನ ಸನ್ನಿವೇಶದಲ್ಲಿ ಜನರಲ್ಲಿ ಒಂದು ರೀತಿಯಾದ ಭಯ ಹುಟ್ಟಿದೆ. ಮಂತ್ರಿಗಳ ಮಟ್ಟದಲ್ಲಿ ಒಬ್ಬ ಮಹಿಳೆಯ ವಿಚಾರಕ್ಕಾಗಿ ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡತಕ್ಕಂಥ ಅಗತ್ಯತೆ ಈ ರಾಜ್ಯದಲ್ಲಿ ಇತ್ತೆ ಎನ್ನುವ ಬಗ್ಗೆ ತಂದಿರತಕ್ಕಂಥ ನಿಲುವಳಿ ಸೂಚನೆಯ ಬಗ್ಗೆ ತಾವು ಅನುಮತಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

೪.೩೦ ಪಿ.ಎಂ.

ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಸುಮಾರು ಎರಡೂವರೆ–ಮೂರು ಗಂಟೆಗಳ ಕಾಲ ನಿಯಮಾವಳಿ ೫೦ರ ಕೆಳಗೆ ಬಹಳ ಗಹನವಾಗಿ ಒಂದು ಸಾರ್ವಜನಿಕ ವಿಷಯದ ಬಗ್ಗೆ ಚರ್ಚೆ ನಡೆದಿದೆ. ಬೇರೆ ವಿಷಯಗಳನ್ನು ಬದಿಗೊತ್ತಿ ಈ ಒಂದು ವಿಷಯವನ್ನು ಚರ್ಚೆ ಮಾಡಬೇಕೆಂದು ಮೋಷನ್ ತರುವುದರ ಮೂಲಕ ಹೇಳಿದ್ದಾರೆ. ನಿಯಮಾವಳಿ ೫೨ ಏನು ಹೇಳುತ್ತದೆ ಎಂದರೆ,

'not more than one such motion shall be made at the same sitting' ಇದು ಸ್ಪಷ್ಟವಾಗಿದೆ.

'not more than one matter shall be discussed on the same motion" ಇದೂ ಸಹಾ ಸ್ಪಷ್ಟವಾಗಿಯೇ ಇದೆ.

'the motion shall be restricted to a specific matter of recent occurrence'

ಈ ಮೂರು ಅಂಶಗಳು ಇದರಲ್ಲಿ ಇಲ್ಲ. ಇಲ್ಲಿಯ ವಿಷಯ ಏನೆಂದರೆ, ಪೋಲೀಸ್ ಅಧಿಕಾರಿಯನ್ನು ವರ್ಗಾವಣೆ ಮಾಡಿರತಕ್ಕ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಆ ನಂತರ ಸಿ.ಓ.ಡಿ. ಅಧಿಕಾರಿಯವರು ರಜಾ ಹಾಕಿ ಹೋಗಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಏಕೆ ರಜಾ ಹೋದರೆಂದು ತಂದಿದ್ದಾರೆ. ಕೇಸ್ ರಿಜಿಸ್ಟರ್ ಆಗಿರುವುದರಿಂದ ಮಾನ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಇದರಲ್ಲಿ ಯಾವುದು ಸಾರ್ವಜನಿಕರ ಗಮನವನ್ನು ಸೆಳೆದಿರತಕ್ಕದ್ದು

ಇದೆಯೆಂದು ನಾನು ಕೇಳುತ್ತೇನೆ. ಇದರಿಂದ ನನಗೆ ಬಹಳ ಆಶ್ಚರ್ಯವಾಗಿದೆ. ಏನೋ ದೇಶದಲ್ಲಿ ಅನಾವೃಷ್ಟಿಯಾಗಿ ಜನ ತೊಂದರೆಗೆ ಈಡಾಗಿದ್ದಾರೆಯೇ? ಏನು ಊಜೀ ನೊಣ ಬಂದು ರಾಜ್ಯದ ರೇಷ್ಮೆಯೆಲ್ಲಾ ಹಾಳಾಗಿದೆಯೇ? ದೇಶದಲ್ಲಿ ಬರಗಾಲ ಬಂದಿದ್ದರೆ ಅದು ಸಾರ್ವಜನಿಕರ ಗಮನ ಸೆಳೆಯುವುದು ಸ್ವಾಭಾವಿಕ. ಆದರೆ ಇಲ್ಲಿ ಅಂತಹ ವಿಷಯ ಏನಿದೆ? ಪೋಲೀಸರು ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ. ಅವರು ಕೇಸ್ ರಿಜಿಸ್ಟರ್ ಮಾಡಿರುವುದಕ್ಕೂ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿರುವುದಕ್ಕೂ ಯಾವುದೇ ಸಂಬಂಧವಿಲ್ಲ. ಪೋಲೀಸ್ ಅಧಿಕಾರಿಗಳು ರಜಾ ಬೇಕೆಂದು ಕೇಳಿದರೆ ಅವರಿಗೆ ರಜಾ ಮಂಜೂರು ಮಾಡಲಾಗುತ್ತದೆ. ಅದನ್ನೆಲ್ಲಾ ಇಲ್ಲಿ ಚರ್ಚೆ ಮಾಡುವುದು ಸಾರ್ವಜನಿಕರಿಗೆ ಸಂಬಂಧಪಟ್ಟದ್ದೇ? ಯಾವ ಅಧಿಕಾರಿ ಎಲ್ಲಿ ಇದ್ದರೆ ಜನರಿಗೆ ಏನು ಬೇಕಾಗಿದೆ? Everyday there will be transfers of officers: Will it be a matter of public importance? Some officers have been transferred. The people of this State are interested in it. The people of this State are interested in clean and honest administration by the Governmedt and they are well aware as to how this Government is fnnctioning smoothly.

ಈ ದಿನ ಕೇವಲ ಕೇಸ್ ರಿಜಿಸ್ಟರ್ ಮಾಡಿರುವ ಆಧಾರದ ಮೇಲೆ ರಾಜಿನಾಮೆಯನ್ನು ತೆಗೆದುಕೊಳ್ಳಿ ಎನ್ನುವುದಾದರೆ, ನಾಳೆ ದಿವಸ ಯಾವ ಅಧಿಕಾರಿಯೂ, ಯಾವ ಮಂತ್ರಿಯೂ ಈ ದೇಶದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಕೆಲವು ಬಾರಿ ಯಾರೋ ಹೊಡೆದರು ಎಂದು ಹೇಳಿ ಕೇಸ್ ರಿಜಿಸ್ಟರ್ ಮಾಡುತ್ತಾರೆ The case has been registered ಈ ದಿನ ಅಧಿಕಾರದಲ್ಲಿ ಇರಬಹುದು, ನಾಳೆ ಇನ್ನೊಬ್ಬರು ಅಧಿಕಾರಕ್ಕೆ ಬರಬಹುದು. ಪೋಲೀಸ್ ಅಧಿಕಾರಿಗಳು ಕೇಸ್ ರಿಜಿಸ್ಟರ್ ಮಾಡಿದ ತಕ್ಷಣ ಅವರಿಂದ ರಾಜೀನಾಮೆಯನ್ನು ಸ್ವೀಕರಿಸಬೇಕೆಂದು ಕೇಳುವುದು ಸಾರ್ವಜನಿಕರ ಗಮನ ಸೆಳೆದಿರತಕ್ಕ ವಿಷಯವಲ್ಲ. ಇಂತಹ ಕೆಲಸವನ್ನು ನಮ್ಮ ಸರ್ಕಾರ ಎಂದೂ ಮಾಡಿಲ್ಲ ಮಂತ್ರಿಯ ರಾಜೀನಾಮೆ ಕೇಳಲು ತನಿಖೆ ಮುಗಿದು ಅವರ ಮೇಲೆ ಚಾರ್ಜ್‌ಷೀಟ್ ಹಾಕಿದಾಗ ಮಾತ್ರ ಉದ್ಭವಿಸುವ ವಿಚಾರ. ಕೆಲವು ಮಾನ್ಯ ಸದಸ್ಯರು ಹೇಳಿದರು. The charge-sheet has not yet been filed. ಅವರಿಗೆ ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ಹೇಳಿದರೆನೋ ಗೊತ್ತಿಲ್ಲ. May be in their anxiety, they must have told like that. ನಮ್ಮ ಸರ್ಕಾರ ಸಾರ್ವಜನಿಕರ ಬಗ್ಗೆ ಗಮನ ಕೊಟ್ಟಿರುವಷ್ಟು ಬೇರೆ ಯಾವ ಸರ್ಕಾರವೂ ಗಮನ ಕೊಟ್ಟಿರಲಿಲ್ಲ. ಹಿಂದೆಯೂ ಒಬ್ಬ ಮಂತ್ರಿಗಳ ಮೇಲೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇತ್ತು. ಅದರಲ್ಲಿ ಸರ್ಕಾರವೇನೂ ತಲೆ ಹಾಕಿರಲಿಲ್ಲ. ಈ ವಿಷಯದ ಬಗ್ಗೆಯೂ ಸರ್ಕಾರ ತಲೆ ಹಾಕುವುದಿಲ್ಲ. ತನಿಖೆ ಮುಗಿಯುವವರೆಗೆ ತಾಳ್ಮೆಯಿಂದ ಕಾಯಬೇಕು. ನನ್ನ ಭದ್ರಾವತಿಯ ಮಹಿಳೆಯೊಬ್ಬಳ ವಿಚಾರ ಹೇಳಿದಿರಿ. ಅದೇ ಹೆಂಗಸು ಅಲ್ಲೊಂದು ರೀತಿ, ಇಲ್ಲೊಂದು ರೀತಿ ಹೇಳಿಕೆ ನೀಡಿದ್ದಾರೆ. ಭದ್ರಾವತಿಯಲ್ಲಿ "ನನಗೆ ಯಾರೋ ಇಬ್ಬರು ಜನರು ಬಂದು ಒತ್ತಾಯ ಮಾಡಿದರು" ಎಂದು ಹೇಳಿದ್ದಾರೆ. At this juncture, I do not wish to go into the details of the case. ಇಲ್ಲಿ ಬಂದು ಈ ರೀತಿ ಹೇಳಿದ್ದಾರೆ. ಇನ್‌ವೆಸ್ಟಿಗೇಷನ್ ಅಧಿಕಾರಿ ಒಂದು ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ನಾಲ್ಕೈದು ಜನರಲ್ಲಿ ಇವರನ್ನೂ ಸೇರಿಸಿಕೊಂಡಿದ್ದಾರೆ. ಸನ್ಮಾನ್ಯ ಸದಸ್ಯರುಗಳು ಹೇಳಿದಹಾಗೆ, ಸಂವಿಧಾನದ ಪ್ರಕಾರ ಅವರನ್ನು ಬಿಡಬೇಕಾಗಿಲ್ಲ. ಸರ್ಕಾರ ಈ ವಿಷಯದಲ್ಲಿ ಕೈಹಾಕಬೇಕಾದ್ದಿಲ್ಲ. ಹಿಂದಿನ ಒಂದು ಪ್ರಕರಣದಲ್ಲೂ ಇನ್‌ವೆಸ್ಟಿಗೇಷನ್ ನಡೆಯುವ ಕಾಲದಲ್ಲಿ ಸರ್ಕಾರ ತಲೆಹಾಕಿದ್ದಿಲ್ಲ. ಯಾವ ಮಂತ್ರಿಗೂ ಸರ್ಕಾರ ರಕ್ಷಣೆ ಕೊಡಬೇಕಾದ್ದಿಲ್ಲ. ಶೀಲ್ಡ್ ಮಾಡಬೇಕೆಂದರೆ ಬೇರೆ ರೀತಿ ಮಾಡಲು ಸಾಧ್ಯವಿದೆ. ಆ ರೀತಿ ಹೋಗಿಲ್ಲ. ಹಿಂದೆ ಕೂಡಾ ತಪ್ಪು ರುಜುವಾತಾದ ಮೇಲೆ ಆ ಮಂತ್ರಿಗಳಿಂದ ರಾಜೀನಾಮೆಯನ್ನು ಪಡೆದಿದ್ದೇನೆ. ಕೇಸ್ ರಿಜಿಸ್ಟರ್ ಮಾಡಿದ ತಕ್ಷಣ ರಾಜೀನಾಮೆಯನ್ನು ಕೊಡಿ ಎಂದು ಹೊರಟರೆ ಅದು ಸರಿಯಾದುದಲ್ಲ. ಇದು ಸಾರ್ವಜನಿಕರ ಗಮನವನ್ನೂ ಸೆಳೆಯುವುದಿಲ್ಲ. ಸಾರ್ವಜನಿಕರ ಗಮನ ಸೆಳೆಯುವುದು ಬೇರೆ ರೀತಿ ಇದೆ. ಅದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆಡಳಿತದ ಬಗ್ಗೆ ಹೇಳಿದ್ದೀರಿ. ಪೋಲೀಸ್ ಇಲಾಖೆ ಬಗ್ಗೆ ಹೇಳಿದ್ದೀರಿ. ಪೋಲೀಸ್ ಇಲಾಖೆ ಬಗ್ಗೆ ಹಿಂದೆಯೂ ಎಷ್ಟೆಷ್ಟು ಟೀಕೆಗಳು ಆಗಿವೆ ಎಂಬುದನ್ನು ಬೇಕಾದರೆ ರೆಕಾರ್ಡ್ ತೆಗೆದು ನೋಡಿ. ಆ ಅಧಿಕಾರಿ ರಜಾವನ್ನು ಕೇಳಿದ್ದರಿಂದ ಅವರಿಗೆ ರಜವನ್ನು ಮಂಜೂರು ಮಾಡಲಾಗಿದೆ. I did not

ask that officer to take leave and go away. In what way, is he connected in the present case? The officer who went on leave neither conducted the investigation of the case in question nor filed it. That officer has nothing to do with this case. There is Special Inspector General of Police to look after it. In what way, the transfer of the Superintendent of Police, Shimoga is connected in the matter under question? ಒಂದು ಗಂಟೆಯಲ್ಲಿ ವರ್ಗಾವಣೆ ಮಾಡಿರುವ ನಿದರ್ಶನಗಳು ಇವೆ. ೨ ಗಂಟೆ, ೬ ಗಂಟೆಗಳಲ್ಲಿ ವರ್ಗಾವಣೆ ಮಾಡಿರುವ ನಿದರ್ಶನಗಳು ಇವೆ. In its wisdom, the Government might have taken a decision; in what way it is relevant here in what way, it is a matter of public importance? The people of this State are not bothered about all these things. They are bothered about the welfare of this State and their problems like poverty food shortage. water scarcity etc. etc., They are least bothered about the transfer of some XYZ officer or some officer who had gone on leave. Some other officer will come in his place and work there. As a Home Minister of the State, I am aware of my duties and responsibilities and I know, how to act and what to do. If the people are not happy, they will surely throw me out. It is purely an administrative matter and it does not have any public importance. I say that the matter does not come under the purview of eighter rule 50 or 59. ಮಂತ್ರಿಗಳು ರಾಜೀನಾಮೆ ಕೊಡಬೇಕೇ ಅಥವಾ ಬೇಡವೇ ಎನ್ನುವುದು ಬೇರೆ ವಿಷಯ. ದೇಶದಲ್ಲಿ ಜನ ಪ್ರಶ್ನೆ ಮಾಡುತ್ತಾರೆ ಎಂದು ಹೇಳಿದೀರಿ. ಜನ ಏನು ಪ್ರಶ್ನೆ ಮಾಡುತ್ತಾರೆ? ಯಾವ ಡಿ.ಐ.ಜಿ, ಯಾವ ರೇಂಜಿನಲ್ಲಿದ್ದಾರೆಂದು. ಯಾವ ಎಸ್ ಪಿ. ಎಲ್ಲಿದ್ದಾರೆಂದು ಯಾರೂ ಕೇಳುವುದಕ್ಕೆ ಹೋಗುವುದಿಲ್ಲ. ಈ ದೇಶದಲ್ಲಿ ಯಾರನ್ನೂ ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಕೆಲವರು ಜಾತಿ ಕುಲ ವರ್ಗದ ಆಧಾರದ ಮೇಲೆ ವರ್ಗಾವಣೆಯ ಬಗ್ಗೆ ಶಿಫಾರಸ್ಸು ತರುವುದುಂಟು. Sir, in west Bengal, within 3 hours, seven officers were transfered. It is the prerogative of the Government which cannot be questioned. ಇವತ್ತು ಆ ಸೆಕ್ರೆಟರಿಯವರನ್ನು ಏಕೆ ಇಟ್ಟುಕೊಂಡಿದ್ದೀರಿ, ಈ ಸೆಕ್ರೆಟರಿಯವರನ್ನು ಯಾಕೆ ಇಟ್ಟುಕೊಂಡಿದ್ದೀರೆಂದು ಕೇಳುವುದಕ್ಕೆ ಯಾರೂ ಬರುವುದಿಲ್ಲ. ನಿಯಮಾವಳಿ ೫೦ರ ಕೆಳಗೆ ದರ್ಜೆ ಮಾಡುವುದಕ್ಕೆ ಬರುವುದಿಲ್ಲವೆಂದು ಅಧ್ಯಕ್ಷರು ಹೇಳಿದರು. ಇದು ನಿಯಮ ೫೯ರ ಕೆಳಗೂ ಬರುವುದಿಲ್ಲ ನಿಯಮ ೫೦ರ ಕೆಳಗೂ ಬರುವುದಿಲ್ಲ. ಮಾನ್ಯ ಅಧ್ಯಕ್ಷರು ಎರಡೂವರೆ ಗಂಟೆಗಳ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇವೆಂದರೂ ಅವರು ಒಪ್ಪಲಿಲ್ಲ. ಈ ವಿಷಯದ ಬಗ್ಗೆ ಎಲ್ಲರೂ ಮಾತನಾಡಿಬಿಟ್ಟಿದ್ದಾರೆ. ಇನ್ನು ಉಳಿದಿರುವುದು ಏನು? ಈ ರೀತಿಯಿಂದಾಗಿ ಸಾರ್ವಜನಿಕರಲ್ಲಿ ಉಳಿದಿರುವ ಅಲ್ಪಸ್ವಲ್ಪ ನಂಬಿಕೆಯೂ ಕಡಿಮೆಯಾಗುತ್ತದೆ. ಅವರು ನಿಯಮ ೫೦ರ ಕೆಳಗೆ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ.

It is there, it is provided for a purpose. ಪ್ರತಿಯೊಂದಕ್ಕೂ ಆಫೀಸರ್‌ಗಳ ಟ್ರಾನ್ಸ್‌ಫರ್‌ಗಳಿಗೆ, ಆಫೀಸರ್‌ಗಳ ಪ್ರಮೋಷನ್‌ಗಳಿಗೆ ಅಡ್ಜರ್ನ್‌ಮೆಂಟ್ ಮೋಷನ್ ತರುತ್ತೇವೆಂದು ಹೇಳಿದರೆ...I am wery very sorry. This will not be appreciated by this House, by yourself or even by the public. ಇದು ನಿಜ, ತಾವು ಹೇಳಿದ್ದೀರಿ, ಒಂದು ವೇಳೆ ಅದನ್ನು ಚರ್ಚೆ ಮಾಡಬೇಕಾದರೆ ಬೇಕಾದಷ್ಟು ಅವಕಾಶವಿದೆ. ಪೋಲೀಸ್ ಡಿಮಾಂಡ್ ಬರುತ್ತದೆ, ಅಂತಹ ಸಂದರ್ಭದಲ್ಲಿ ಚರ್ಚೆ ಮಾಡಿ ಈ ಸದನದಲ್ಲಿ ಚರ್ಚೆ ಬಂದಾಗ ಪೋಲೀಸ್ ಇಲಾಖೆಯ ಮೇಲೆ ಮಾತನಾಡುವಾಗ ಏನೇನು ಮಾತನಾಡಬೇಕೋ ಮಾತನಾಡಿ. It is not the question as to how the Government is moving. Government is not

sparing anybody. ನಾನು ತಮಗೆ ಹೇಳುವುದಾದರೆ ಈ ರೀತಿ ತಾವು ನಿಲುವಳಿ ಸೂಚನೆ ತರುವುದು ಲ್ಯಾಪ್ಸ್ ಆಗುತ್ತದೆ. You can give your valuable suggestions and they will be certainly be honoured. ಅವರು ಹೇಳಿದರು, ತಾವು ಕೇಳಿಬಿಟ್ಟಿರಿ, ನಮ್ಮ ೧೮ ತಿಂಗಳ ಅಧಿಕಾರವಧಿಯಲ್ಲಿ ಮಾನ್ಯ ಸದಸ್ಯರೆಲ್ಲಾ ಕೊಟ್ಟ ಸಲಹೆಗಳನ್ನು ತೆಗೆದುಕೊಂಡು, ಆ ರೀತಿ ನಡೆದುಕೊಂಡಿದ್ದೇವೆ. Can any Hon'ble Member of this House quote one instance that I have not honoured his suggestions and proper action has not been taken and the matter not been dealt with all seriousness. You always keep this weapon of rule 50, every day and make a laughing stock.

SRI S. R. BOMMAI.—Sir, I am on a point of order. The Hon'ble Chief Minister in his emotional way of putting things said that we have made a laughing stock. It is a clear reflection on the functioning of the Members particularly the Members of the Opposition. I request you to protect us. Let him reply in a congenial way. Saying that it is a laughing stock is an insult to every Member, an insult to the Opposition. He cannot call us a laughing stock. We are doing our duty. Is it a laughing stock.

SRI R. GUNDU RAO.—Sri S. R. Bommai is a good friend of mine and he said that I am in emotion. But now who is in emotion.

SRI S. R. BOMMAI.—It has cut my prestige, honour...

SRI R. GUNDU RAO.—Everybody will become emotional and comes down according to the situations.

SRI S. R. BOMMAI.— You cannot say that it is a laughing stock.

SRI R. GUNGU RAO.—You should use this in such a forum and such an issue......

SRI AZEEZ SAIT.—If this issue cannot be brought under Rule 50, can you suggest as to what issue can be brought under this Rule ?

SRI R. GUNDU RAO —I will tell you. ನಾನು ಏನು ಮಾಡುವುದಕ್ಕಾಗುತ್ತದೆ. ರೂಲ್ ೫೦ರ ಕೆಳಗೆ ಏನು ಇದೆ, ನೀವು ರೂಲ್ ೫೦ರ ಕೆಳಗೆ ತಂದರೆ ಈ ಹೌಸ್ ಡಿಸಾಲ್ವ್ ಆಗಿ ಹೋಗುತ್ತದೇನು ? ಅದನ್ನು ಬಿಟ್ಟು ಪ್ರತಿಯೊಂದಕ್ಕೂ ಈ ರೀತಿ ಮಾಡಿದರೆ ನಮಗೇನು ಕಷ್ಟ... One man's food is another man's poison. ಅದಕ್ಕೋಸ್ಕರ ಇದರ ಬಗ್ಗೆ ಮೂರು-ನಾಲ್ಕು ಗಂಟೆಗಳ ಕಾಲ ಚರ್ಚೆಮಾಡಿಕೊಂಡು ಕುಳಿತರೆ ಏನು ಪ್ರಯೋಜನ ?. ಇವತ್ತಿನ ದಿವಸ ಯಾರೇ ಅಧಿಕಾರಕ್ಕೆ ಬಂದರೂ ವಿಷಯಗಳನ್ನು ಮಾತ್ರ ಚರ್ಚೆಮಾಡಬೇಕು. ಮಾನ್ಯ ವಿರೋಧಪಕ್ಷದ ಬೊಮ್ಮಾಯಿಯವರು ಬಹಳ ಜಾಸ್ತಿ ಓದಿದ್ದಾರೆ. ಅವರು ಓದಿ ಓದಿ...ನಾನು ಕಡಿಮೆ ಓದಿದ್ದೇನೆ. ನಾನೂ ಅಲ್ಪ ಸ್ವಲ್ಪ ಓದಿಕೊಂಡಿದ್ದೇನೆ. ತಾವು ಕೂಡ ಇರುವುದನ್ನು ಸರಿಯಾಗಿ ಓದಿ. This is not the intention of the Government. In the interest of the state, bring your issues and we will discuss them and we are here to co-operate. It is purely an administrative matter. Did the Superintendent of Police, Shimoga, file the case ? Did the Superintendent

of Police know about all these things ? It is purely an administrative set-up. Why should we bother about all thes things.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ಓದುವುದು ಬೇಡ, ನೀವು ಊದಿ.

ಶ್ರೀ ಆರ್. ಗುಂಡೂರಾವ್.—ನೀವು ಚೆನ್ನಾಗಿ ಓದಿದ್ದೀರಿ, ಓದಿ ಓದಿ ನೀವು ಊದುತ್ತಾ ಇರಿ.

ಶ್ರೀ ಕೆ. ಎಚ್. ಶ್ರೀನಿವಾಸನ್.—ನೀವು ಒಂದು ಸಾರಿ ಊದಿ ಮುಳುಗಿಸಿದ್ದೀರಿ.

ಶ್ರೀ ಆರ್. ಗುಂಡೂರಾವ್ ನಾವು ಸ್ವಲ್ಪ ಮುಳುಗಿಸಿದ್ದೀವಿ, ನೀವು ಚೆನ್ನಾಗಿ ಮುಳುಗಿಸಿ. ನಿಮ್ಮಂತಹವರೆಲ್ಲಾ ಇದ್ದರೆ......

ಶ್ರೀ ಕೆ. ಎಚ್. ಶ್ರೀನಿವಾಸ್.—ಮುಖ್ಯಮಂತ್ರಿಗಳು ಓದಿಲ್ಲವೆಂದರು. ನಿಮಗೆ ಬಾರದ ಓದನ್ನು ಪುಸ್ತಕದಲ್ಲಿ ಬರೆದಿರುವುದನ್ನು ಏತಕ್ಕೆ ಓದುತ್ತೀರಿ ?

ಶ್ರೀ ಆರ್. ಗುಂಡೂರಾವ್.—ನಾವು ಹೇಗಾದರೂ ಓದುತ್ತೇವೆ, ನೀವೆಲ್ಲಾ ಸೇರಿ ಇನ್ನು ೧೫ ದಿವಸಗಳಲ್ಲಿ ಅವರನ್ನು ಪೂರ್ತಿ ಮುಳುಗಿಸಿಬಿಡುತ್ತೀರಿ.

Sir, I quote :

> "Adjournment Motion is not admissible unless there is a failure on the part of the Government"

There is no failure on the part of the Government. You have to wait patiently. ಈಗಾಗಲೇ ಕೇಸ್ ರಿಜಿಸ್ಟರ್ ಮಾಡಿದ್ದೇವೆ. ನಿಮ್ಮ ಮನಸ್ಸಿನಲ್ಲಿ ಏನು ಭಾವನೆ ಮಾಡಿಕೊಂಡಿದ್ದೀರಿ, ಯಾವ ಭಾವನೆಯನ್ನಿಟ್ಟುಕೊಂಡು ತರುತ್ತಿದ್ದೀರಿ. ಇನ್‌ವೆಸ್ಟಿಗೇಷನ್ ಆಫೀಸರ್ ಹೆಸರು ಹೇಳಿಲ್ಲ. ಡಿ.ಐ.ಜಿ. ಭಟ್‌ರವರನ್ನು ಏತಕ್ಕೆ ವರ್ಗಮಾಡಲಾಗಿದೆ, ಎಸ್. ಪಿ. ಶಿವಮೊಗ್ಗ ಇವರನ್ನು ಏತಕ್ಕೆ ವರ್ಗಮಾಡಲಾಗಿದೆ. ಕೇಸ್ ಇನ್‌ವೆಸ್ಟಿಗೇಷನ್ ಮಾಡಿದವರು ಯಾರು ಮತ್ತು ಟ್ರಾನ್ಸ್‌ಫರ್ ಆದವರ ಹೆಸರುಗಳು ಒಬ್ಬರಿಗೂ ಗೊತ್ತಿಲ್ಲ. ವರ್ಗವಾದ ಮೇಲೆ ಅವರು ಆ ಜಾಗದಿಂದ ಬೇರೆ ಕಡೆ ಹೋಗುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಸದನದಲ್ಲಿ ಟ್ರಾನ್ಸ್‌ಫರ್‌ಗೂ ಈ ವಿಷಯಕ್ಕೂ ಏನು ಸಂಬಂಧವಿಲ್ಲವೆಂದು ತಾವು ವಿವರಿಸಿ ಕನ್‌ಫ್ಯೂಸ್ ಮಾಡಬೇಡಿ. ಈ ವಿಷಯಗಳೆಲ್ಲಾ ಜಗಜ್ಜಾಹೀರ ಪತ್ರಿಕೆಗಳಲ್ಲಿ ಬಂದಿದೆ. Certainly, we will stand corrected so far as that aspect is concerned.

SRI R. GUNDU RAO.—You could have asked me. ಇದರಿಂದ ಸಾರ್ವಜನಿಕರಲ್ಲಿ ಏನು ಗಾಬರಿಯಾಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾರ್ವಜನಿಕರು ತಾವು ಹೇಳುವುದನ್ನು ಅರ್ಥಮಾಡಿಕೊಳ್ಳುತ್ತಾರೆ, ಒಬ್ಬ ಮಂತ್ರಿಯು ಮೇಲೆ ಕೇಸ್ ರಿಜಿಸ್ಟರ್ ಆಗಿ ಅವರು ಅಧಿಕಾರದಲ್ಲಿದ್ದರೆ, ಪತ್ರಿಕೆಗಳಲ್ಲಿ ಬಂದಿರುವುದಕ್ಕೂ ಅದಕ್ಕೂ ಇದಕ್ಕೂ ಸಂಬಂಧವಿದೆ.

ಶ್ರೀ ಆರ್. ಗುಂಡೂರಾವ್.—ನಿಮಗೆ ಈ ಸಮಸ್ಯೆ ಬರಲಿಕ್ಕೆ ಕಾರಣವಿಲ್ಲ. ಮಂತ್ರಿಗಳ ಮೇಲೆ ಕೇಸ್ ರಿಜಿಸ್ಟರ್ ಆಗಿದೆ. ಹಿಂದೆ ಒಬ್ಬ ಮಂತ್ರಿಗಳ ಮೇಲೆ ಕೇಸ್ ರಿಜಿಸ್ಟರ್ ಆಗಿ ವಿಚಾರಣೆಗಾಗಿ, ಅವರ ಮೇಲೆ ಚಾರ್ಜ್‌ಷೀಟ್ ಫೈಲ್ ಮಾಡಿದ ಮೇಲೆ ಅವರ ರಾಜೀನಾಮೆಯನ್ನು ತೆಗೆದುಕೊಂಡಿದ್ದೇವೆ ಕೇಸ್ ರಿಜಿಸ್ಟರ್ ಆದ ತಕ್ಷಣ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳುವುದು, ನಾನು ರಾಜೀನಾಮೆ ಯನ್ನು ಕೇಳಬೇಕೆಂದು ಹೇಳುವುದು, ಇವೆರಡೂ ಉದ್ಭವವಾಗುವುದಿಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಮಂತ್ರಿಗಳ ರಾಜೀನಾಮೆ ಪ್ರಶ್ನೆ.

ಶ್ರೀ ಆರ್. ಗುಂಡೂರಾವ್(ಮುಖ್ಯಮಂತ್ರಿಗಳು).—ಆಮೇಲೆ ಈವೊತ್ತಿನ ದಿವಸ ಯಾರಾದರೂ ಒಬ್ಬರು ಎಂ.ಎಲ್.ಎ. ಮೇಲೆ ಕೇಸ್ ರಿಜಿಸ್ಟರ್ಡ್ ಆಗುತ್ತದೆ ಅಥವಾ ಇನ್ನೊಬ್ಬರ ಮೇಲೆ ಕೇಸ್ ರಿಜಸ್ಟರ್ಡ್ ಆಗುತ್ತದೆ ಅಂತ ಇಟ್ಟುಕೊಳ್ಳೋಣ. Anyway an M.L.A. is also a part of the Government. ಮತ್ತೆ ತಮಗೆ ಹೇಳಬೇಕಾದರೆ ಈವೊತ್ತಿನ ಅವರು ರೂಲಿಂಗ್ ಪಾರ್ಟಿ ಎಂ.ಎಲ್.ಎ.ನೇ ಆಗಿರಬಹುದು ಒಬ್ಬ ಮಂತ್ರಿಯ ಹತ್ತಿರ ಯಾವುದಾದರೂ ಕೆಲಸಕ್ಕೆ ಬಂದರೆ ಅಥವಾ ಅವರು ಈಸದನಕ್ಕೆ ಬರಬೇಕಾದರೆ ತಕ್ಷಣವಾಗಿ ಅವರನ್ನು ಬರಬೇಡಿ ಎಂದು ಹೇಳುವುದಕ್ಕಾಗುತ್ತದೆಯೇ? ಹಾಗೆ ಹೇಳುವುದಕ್ಕೆ ಬರುವುದಿಲ್ಲ. ತಾವು ಹೇಳುತ್ತಾ ಇದ್ದಿರಿ ಏನೆಂದರೆ ಅವರ ಮೇಲೆ ಕೇಸ್ ರಿಜಸ್ಟರ್ಡ್ ಆಗಿದೆ, ಅದುದರಿಂದ ಅವರಿಂದ ರಾಜೀನಾಮೆ ತೆಗೆದುಕೊಳ್ಳಬೇಕು ಎಂದು ಮತ್ತು ಇದು ಪಬ್ಲಿಕ್ ಇಂಪಾರ್ಟೆನ್ಸ್ ಆಗಿರುವುದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಾವು ಯೋಚನೆ ಮಾಡುತ್ತಾ ಇಲ್ಲ ಎಂದು ಹೇಳುತ್ತಿದ್ದೀರಿ. ತಮಗೆ ಹೇಳಬೇಕಾದರೆ ಇದರಲ್ಲಿ ಯಾವ ಪಬ್ಲಿಕ್ ಇಂಪಾರ್ಟೆನ್ಸ್ ಕೂಡ ಇಲ್ಲ. You have to take it in a broad and deep manner and then come to a conclusion. Therefore it cannot be allowed.

SRI D. DEVARAJ URS.—Now the Government has replied and you are going to give your Ruling. Before that I would like to sudmit only a few points, the points which are relevant an which the Chief Minister mentioned.

ಶ್ರೀ ಆರ್. ಗುಂಡೂರಾವ್.—ಈಗ ಅವರು ಮಾತನಾಡಿದರೆ ಆಮೇಲೆ ನಾನೂ ಕೂಡ ಮಾತನಾಡಬೇಕಾಗುತ್ತದೆ. ಆದುದರಿಂದ ಅವರು ಯಾವ ಪ್ರೊಸೀಜರ್‌ನಲ್ಲಿ ಮಾತನಾಡುತ್ತಾರೆ ಅನ್ನುವುದನ್ನು ಮೊದಲು ತಿಳಿಸಲಿ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಈಗ ತಾನೇ ಮಾನ್ಯ ಮುಖ್ಯ ಮಂತ್ರಿಗಳು ಇದು ಅಂಥಾ ಪಬ್ಲಿಕ್ ಇಂಪಾರ್ಟೆನ್ಸ್ ವಿಚಾರ ಏನೂ ಅಲ್ಲ, ಆದುದರಿಂದ ಈ ವಿಷಯ ಈ ಸದನಕ್ಕೆ ಬರುವುದಿಲ್ಲ ಎಂದು ಹೇಳಿದರು. ಮತ್ತು ಇದು ರೂಲ್ ನಂಬರ್ ೫೦ರ ಕೆಳಗೂ ಬರುವುದಿಲ್ಲ. ೬೦ರ ಕೆಳಗೂ ಬರುವುದಿಲ್ಲ, ೭೦ರ ಕೆಳಗೂ ಬರುವುದಿಲ್ಲ. ೯೦ರ ಕೆಳಗೂ ಬರುವುದಿಲ್ಲ. ಮತ್ತೆ ಇವರು ರೂಲ್ ೫೯ರ ಕೆಳಗೂ ಬರುವುದಿಲ್ಲ. ಮಾನ್ಯ ಅಧ್ಯಕ್ಷರು ಇದನ್ನು ರೂಲ್ ನಂಬರ್ ೫೯ರ ಕೆಳಗೆ ಏತಕ್ಕೆ ತೆಗೆದುಕೊಳ್ಳಬಾರದು ಎಂದು ಹೇಳಿದ್ದೀರಿ. Out of his generosity. he may concede or may not concede. Strictly speaking, he does not want to concede. This attitude and the way in which the Chief Minister is treating the subject, can we consider it as a right thing that has happened? There are so many things. ಇದರಿಂದ ಮಳೆ ಹುಯ್ಯುವುದಿಲ್ಲ, ಬೆಳೆ ಬೆಳೆಯುವುದಿಲ್ಲ, ಇದರಿಂದ ಊಟ ಸಿಕ್ಕುವುದಿಲ್ಲ, ಅನ್ನ ಸಿಕ್ಕುವುದಿಲ್ಲ ಅಂತ ಹೇಳಿದ್ದಾರೆ. ಇಂಥಾ ವಿಷಯವನ್ನು ತೆಗೆದುಕೊಂಡು ಬಂದಿದ್ದಾರೆ ಅನ್ನುವ ಮಾತನ್ನು ಹೇಳಿದ್ದಾರೆ. ಸರ್ಕಾರ ಏನು ಮಾಡಬೇಕು ಅದನ್ನು ನಾವು ಹೇಳಲೇ ಬೇಕಾಗುತ್ತದೆ. ಯಾವ ಮಂತ್ರಿಯಾದರೂ ಇರಲಿ ಯಾವ ಮಂತ್ರಿಯಾದರೂ ಹೋಗಲಿ ಅದಕ್ಕೂ ನಮಗೂ ಏನೂ ಸಂಬಂಧವಿಲ್ಲ ಅನ್ನುವುದು ನನಗೂ ಗೊತ್ತಿದೆ. ಆದರೆ ನಮಗೆ ಸಂಬಂಧ ಇರುವುದು ಏನು ಎಂದರೆ ಆ ಮಂತ್ರಿಗಳ ಬಿಹೇವಿಯರ್ ಏನು ಇದೆ ಅದಕ್ಕೂ ನಮಗೂ ಸಂಬಂಧ ಇದೆ. ಅದನ್ನು ಯಾರು ಕೂಡ ನಾವು ಹೇಳಿಸಿಕೊಳ್ಳಬೇಕಾದ್ದಿಲ್ಲ. Therefore Sir, we strongly protest the attitude of the Government and we do not want to participate now and now we want to sit in Dharna here.

SRI M. VEERAPPA MOILY.—Why should you become so much desperate?

(The hon. Members belonging to the Congress (U) and C. P. I, Parties entered the aisle and sat)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಈ ವಿಷಯ ಸಾರ್ವತ್ರಿಕವಾಗಿ ಸಂಬಂಧಪಟ್ಟಂಥಾ ವಿಚಾರವೇನೂ ಅಲ್ಲ ಅನ್ನುವುದನ್ನು ಬಹಳ ಲಘುವಾಗಿ ಹೇಳಿದ್ದಾರೆ, ಅದರಂತೆ ನಡೆದುಕೊಂಡಿದ್ದಾರೆ. ಆದುದರಿಂದ ನಾನು ಈಗಲೂ ಕೂಡ ಹೇಳಬಯಸುತ್ತೇನೆ ಮಾನ್ಯ ಸಚಿವರಾದಂಥಾ ಇಬ್ರಾಹಿಂರವರ ಹತ್ತಿರ ರಾಜೀನಾಮೆ ತೆಗೆದುಕೊಂಡು ಆ ಬಗ್ಗೆ ಯೋಗ್ಯ ವಿಚಾರಣೆ ಮಾಡತಕ್ಕಂಥಾದ್ದಕ್ಕೆ ತಾವು ಅವಕಾಶ ಮಾಡಿಕೊಡಬೇಕು ಇಲ್ಲದೇ ಹೋದರೆ ನಾವು ಈಗ ಇಲ್ಲಿ ಧರಣಿ ಕೂಡುತ್ತೇನೆ.

(The hon. Members belonging to the Janata Party also entered the aisle and sat)

SRI A. LAKSHMISAGAR.—It is quite apparent that the Government wants to shield the alleged criminal who happens to be a Minister.

SRI H. GANGADHARAN.—As a protest, westage a walk-out. That is our code of conduct.

(Hon. Members belonging to B.J.P. with drew from the House)

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ನನ್ನನ್ನೂ ಕೂಡ ದೇವರಾಜ ಅರಸರ ಕಾಲದಲ್ಲಿ ೯ ಸಾರಿ ಹೊರಗೆ ಹಾಕಿದ್ದಾರೆ.

SRI K. BHASKAR NAIDU.—Mr. Speaker Sir, the House may be adjurned for half an hour.

ಅಧ್ಯಕ್ಷರು.—ವಿರೋಧ ಪಕ್ಷದವರು ಈ ವಿಚಾರವನ್ನು ಸವಿಸ್ತಾರವಾಗಿ ಪ್ರಸ್ತಾಪ ಮಾಡಲು ಅನುಕೂಲ ಮಾಡಿಕೊಡುವುದಕ್ಕಾಗಿ ರೂಲ್ ೫೦ ರಲ್ಲಾಗಲಿ ಅಥವಾ ೫೮ರ ಕೆಳಗೆ ಆಗಲಿ ಅವಕಾಶ ಮಾಡಿಕೊಡಬೇಕೇ ಎನ್ನುವ ವಿಚಾರ ನನ್ನ ಮುಂದೆ ಇತ್ತು. ತಮಗೆ ಹೇಳಬೇಕಾದರೆ ಈ ವಿಚಾರವನ್ನು ೫೦ರ ಕೆಳಗೆ ತೆಗೆದುಕೊಳ್ಳಬೇಕೆಂದು ರೂಲಿಂಗ್ ಕೊಡಬೇಕೆನ್ನುವ ಇಚ್ಛೆ ಇತ್ತು ಆದರೆ... ..

SRI B. B. SAYANAK.—I am on a Point of Order, Sir, When the House is not in order, how can......

SRI MALLUR ANANDA RAO.—When the House is not in Order, how can raise a point of order ?

ಅಧ್ಯಕ್ಷರು.—ಈಗಲೂ ಕೂಡ ನಾನು ಹೇಳುತ್ತೇನೆ. ವಿರೋಧ ಪಕ್ಷದ ಸದಸ್ಯರು ಈ ಬಗ್ಗೆ ಕೋಅಪರೇಟ್ ಮಾಡಿದ್ದರೆ ಈ ವಿಷಯದಲ್ಲಿ ಇನ್ನೂ ಹೆಚ್ಚಿಗೆ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಬಹುದಾಗಿತ್ತು. ಆದರೆ ಆರೀತಿ ಮಾಡಿದೆ ಈ ರೀತಿಯಾಗಿ ಧರಣಿ ಕೂತಿರತಕ್ಕಂಥಾದ್ದು ಸರಿಯಾದುದಲ್ಲ ಎಂದು ಹೇಳುತ್ತೇನೆ. ಮತ್ತೊಂದು ಸಾರಿ ವಿರೋಧ ಪಕ್ಷದ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ ಏನೆಂದರೆ ತಾವುಗಳು ಬಂದು ತಮ್ಮ ತಮ್ಮ ಜಾಗದಲ್ಲಿ ಕೂತುಕೊಳ್ಳಬೇಕು ಎಂದು. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕಾರಣಗಳನ್ನು ಹೇಳಿದ ಮೇಲೆ ಅದರಲ್ಲೂ ಪ್ರಮುಖವಾಗಿ ಈ ಅಧಿಕಾರಿಗಳ ವರ್ಗಾವಣೆ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ ಮೇಲೂ ಕೂಡ ತಾವುಗಳು ಇದನ್ನು ಕೇಳಿಯೂ ಈ ರೀತಿಯಾಗಿ ಧರಣಿ ಕೂತುಕೊಳ್ಳುವುದು ಸರಿಯಾದುದಲ್ಲ. ಆದುದರಿಂದ ತಾವುಗಳೆಲ್ಲರೂ ತಮ್ಮ ತಮ್ಮ ಜಾಗದಲ್ಲಿ ಬಂದು ಕೂತುಕೊಂಡು ಈ ಸದನದ ನಡವಳಿಕೆಗಳಲ್ಲಿ ಭಾಗವಹಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಈ ರೀತಿ ಮತ್ತೊಂದು ಸಾರಿ ಆಗಬಾರದು ಎಂದು ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ವಾಮಿ, ತಾವು ನಾವು ಹೇಳಿದ್ದನ್ನೆಲ್ಲಾ ಕೇಳಿದ್ದೀರಿ. ನೀವು ಹೇಳುವುದಕ್ಕೂ ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ ಸ್ವಾಮಿ.

ಅಧ್ಯಕ್ಷರು.—ತಾವು ನಾನು ಈಗ ಹೇಳತಕ್ಕಂಥಾ ರೂಲಿಂಗ್ ಅನ್ನು ಕಾಯುಲಿಲ್ಲವಲ್ಲಾ. ಅಷ್ಟು ಬೇಗ ಈ ರೀತಿ ಮಾಡಿದ್ದೀರಲ್ಲಾ,

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ನಾವುಗಳು ಈಗ ಧರಣಿ ಕೂತಿರುವುದು ನಿಮ್ಮ ವಿರುದ್ಧ ಅಲ್ಲ. ನಿಮ್ಮ ರೂಲಿಂಗ್ ವಿರುದ್ಧಕ್ಕಲ್ಲ. ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು.

ಅಧ್ಯಕ್ಷರು.—ನಾನು ಇದು ಸಾರ್ವಜನಿಕ ಹಿತದೃಷ್ಟಿಯಿಂದ ಸಾರ್ವಜನಿಕವಾಗಿ ಸಂಬಂಧ ಪಟ್ಟ ಹಾಗೆ ಈ ವಿಷಯವನ್ನು ರೂಲ್ ೫೯ರ ಕೆಳಗೆ ವಿಚಾರ ಮಾಡಬೇಕು ಎಂದು ನಾನು ತಮಗೆ ಹೇಳಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮಗೆ ನಾನು 'ಇಂಥಾದ್ದೇ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಪ್ರಸ್ತಾಪವಾದಗ ಹಿಂದೆ ಯಾರ್ಯಾರು ರಾಜೀನಾಮೆ ಕೊಟ್ಟರು ಎನ್ನುವ ವಿಷಯವನ್ನು ತಿಳಿಸಿದ್ದೇನೆ. ಮಾನ್ಯ ಕಿತ್ತೂರ್‌ರವರೂ ಮತ್ತು ದೇವೇಂದ್ರಪ್ಪಘಾಳಪ್ಪನವರು ಕೂಡ ಒಂದು ಪ್ರಕರಣದಲ್ಲಿ ರಾಜೀನಾಮೆ ಕೊಟ್ಟರು ಅನ್ನುವ ವಿಷಯವನ್ನು ಹೇಳಿದ್ದೇನೆ ಅದೇ ತರಹ ಒಂದು ಸಂಪ್ರದಾಯವನ್ನು ಇವರು ಬೆಳೆಸಿಕೊಂಡು ಬರಬೇಕು ಹಾಗೂ ಆದರಂತೆ ನಡೆಯಬೇಕು ಅಂತ ಹೇಳಿರುವ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಬಹಳ ಲಘುವಾಗಿ ತೆಗೆದುಕೊಂಡು ಮಾತನಾಡುತ್ತಿದ್ದಾರಲ್ಲಾ ಅದಕ್ಕೋಸ್ಕರವಾಗಿ ನಾವುಗಳು ಇಂದು ಇಲ್ಲಿ ಧರಣಿ ಕೂತಿದ್ದೇವೆ.

ಅಧ್ಯಕ್ಷರು.—ವಿರೋಧಪಕ್ಷದ ನಾಯಕರಲ್ಲಿ ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಈಗ ವಿರೋಧ ಪಕ್ಷದ ನಾಯಕರು ಅನ್ನುವವರು ಯಾರೂ ಇಲ್ಲವಲ್ಲ.

ಅಧ್ಯಕ್ಷರು.—ಯಾವ ಒಂದು ಪಕ್ಷ ಹೆಚ್ಚು ಸಂಖ್ಯೆಯಲ್ಲಿರುತ್ತದೋ ಆ ಪಕ್ಷದವರನ್ನು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ ತಾವುಗಳೆಲ್ಲರೂ ಬಂದು ತಮ್ಮ ತಮ್ಮ ಜಾಗದಲ್ಲಿ ಬಂದು ಕೂತುಕೊಂಡು ಈ ಸದನದ ನಡಳಿಕೆಗಳಲ್ಲಿ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಯಾವ ಸದಸ್ಯರೂ ಬಂದು ತಮ್ಮ ತಮ್ಮ ಜಾಗದಲ್ಲಿ ಕೂತುಕೊಳ್ಳಲಿಲ್ಲ)

MR. SPEAKER.—The House will now stand adjourned for fifteen Minutes.

(The House adjourned at 4.58 p.m. for fifteen Minutes)

(ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು.)

(ಪುನ: ಸಾಯಂಕಾಲ ೫–೫೦ಕ್ಕೆ ಸಭೆ ಸೇರಿತು)

ಅಧ್ಯಕ್ಷರು.—ಇನ್ನೂ ಕೂಡ ತಡವಾಗಿಲ್ಲ ಮಾನ್ಯ ವಿರೋಧ ಪಕ್ಷದವರು ಪುನರ್ ಪರಿಶೀಲನೆ ಮಾಡಬೇಕು ರೂಲ್ ೫೯ರ ಕೆಳಗೆ ಡಿಸ್ಕಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ತಮ್ಮ ತಮ್ಮ ಸ್ಥಾನಕ್ಕೆ ಬಂದ ಕುಳಿತುಕೊಂಡು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ದಯವಿಟ್ಟು ಸರ್ಕಾರವೇ ಪುನರ್ ಪರಿಶೀಲನೆ ಮಾಡಿ ಸಂಬಂಧಪಟ್ಟ ಮಂತ್ರಿಗಳವರಿಂದ ರಾಜೀನಾಮೆ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಎಲ್ಲಾ ಸರಿ ಹೋಗುತ್ತದೆ.

ಅಧ್ಯಕ್ಷರು.—ನಾನು ಒಂದು ನಿರ್ಣಯವನ್ನು ಕೊಡುವುದಕ್ಕಿಂತ ಮುಂಚಿತವಾಗಿ ವಿರೋಧ ಪಕ್ಷದವರು ಧರಣಿ ಕೂತಿರುವುದು ನನಗೆ ನಿಜವಾಗಿಯೂ ವಿಷಾದವೆನ್ನಿಸುತ್ತಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾವು ಧರಣಿ ಮಾಡುತ್ತಿರುವುದರಲ್ಲಿ ಒಂದು ಉದ್ದೇಶವಿದೆ. ತಾವು ರೂಲಿಂಗ್ ಕೊಟ್ಟ ಮೇಲೆ ಧರಣಿ ಕೂತರೆ ಅದು ತಮ್ಮ ವಿರುದ್ಧ ಮಾಡಿದ ಹಾಗಾಗುತ್ತದೆ ಅದು ನಮ್ಮ ಉದ್ದೇಶವಲ್ಲ. ಸರ್ಕಾರ ತೆಗೆದುಕೊಂಡಿರತಕ್ಕ ನಿಲವು ಏನಿದೆ ಅದು ತಪ್ಪು ಎಂದು ಪ್ರತಿಪಾದನೆ ಮಾಡುತ್ತಿರುವಾಗ ನಮ್ಮ ಸಹಾಯಕ್ಕೆ ತಾವು ಬರಬೇಕಾಗುತ್ತದೆ ಇದು ಸಾರ್ವಜನಿಕವಾಗಿ ಅತ್ಯಂತ ಪ್ರಾಮುಖ್ಯವಾದಂಥ ವಿಚಾರವೆಂದು ತಾವು ಸಹ ಒಪ್ಪಿಕೊಂಡಿದ್ದೀರಿ. ಇದರಲ್ಲಿ ಪ್ರಿಸ್ಟೇಜ್‌ನ ಏನೂ ಇಲ್ಲ.

ಅಧ್ಯಕ್ಷರು.—ರೂಲ್ ೫೯ರ ಕೆಳಗೆ ಕನವರ್ಟ್ ಮಾಡುವುದಕ್ಕೆ ತಯಾರಾಗಿದ್ದೇನೆ. ಅದಕ್ಕೆ ಸರ್ಕಾರ ಬಹಳ ಮಟ್ಟಿಗೆ ಒಪ್ಪಿಕೊಳ್ಳುತ್ತದೆಂದು ಭಾವಿಸಿದ್ದೇನೆ. ರೂಲ್ ೫೦ರ ಕೆಳಗೆ ನನ್ನ ಅನುಮತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ, ಅನುಮತಿಯನ್ನು ಕೊಟ್ಟಿಲ್ಲ. ಆದುದರಿಂದ ಇವತ್ತಿನ ದಿವಸದ ಕಾರ್ಯಕಲಾಪಗಳನ್ನು ಇವತ್ತಿಗೆ ಮುಗಿಸಿ ನಾಳೆ ೧ ಗಂಟೆಗೆ ಪುನಃ ಸಭೆ ಸೇರುವುದು.

(The House adjourned at Fifty-Five minutes past Five of the Clock to meet again at One of the Clock on Tuesday, the 23rd June, 1981.)